Swabhimani Sahakari
Pages - 28, ₹12
Volume -13
Issue - 09
September- 2016

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ

**ಪರಿಸರಸ್ನೇಹಿ
ಗೌರಿ-ಗಣೇಶರ ಮೂರ್ತಿಯನ್ನು ಪೂಜಿಸಿ
ಅರ್ಥಪೂರ್ಣವಾಗಿ ಹಬ್ಬ ಆಚರಿಸಿ**



ಲಂಬೋದರ ಲಕುಮಿಕರ
ಅಂಬಾಸುತ ಅಮರ ವಿನುತ ||ಪ.||
ಶ್ರೀ ಗಣನಾಥ ಸಿಂಧುರ ವರ್ಣ
ಕರುಣ ಸಾಗರ ಕರಿವದನ ||1||
ಸಿದ್ಧ ಚಾರಣ ಗಣ ಸೇವಿತ
ಸಿದ್ಧಿ ವಿನಾಯಕ ತೇ ನಮೋ ನಮೋ ||2||
ಸಕಲ ವಿದ್ಯಾ ಆದಿ ಪೂಜಿತ
ಸರ್ವೋತ್ತಮ ತೇ ನಮೋ ನಮೋ ||3||

–ಪುರಂದರದಾಸ

**ನಾಡಿನ ಸಮಸ್ತ ಸಹಕಾರಿ ಬಂಧುಗಳಿಗೆ
ಗೌರಿ–ಗಣೇಶ ಹಾಗೂ ಬಕ್ರೀದ್ ಹಬ್ಬದ
ಶುಭಾಷಯಗಳು**

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ
ಸದಸ್ಯರು ಹಾಗೂ ಸಿಬ್ಬಂದಿ ವರ್ಗ



# ಸಂಯುಕ್ತ ಸಹಕಾರಿಯ 15ನೇ ಸಾಮಾನ್ಯ ಸಭೆ - ಅರ್ಥಪೂರ್ಣ ಚರ್ಚೆ - ಅನೇಕ ವೈವಿಧ್ಯತೆ ಯಶಸ್ಸಿಗೆ ಸಹಕರಿಸಿದ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳು

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಗೌರಿ ಗಣೇಶ, ಬಕ್ರೀದ್ ಹಾಗೂ ಓಣಂ ಹಬ್ಬಗಳ ಶುಭಾಷಯಗಳು. ಎಲ್ಲಾ ಸಹಕಾರಿಗಳಿಗೆ ಅವರವರ ಕೆಲಸಕಾರ್ಯಗಳು ನಿರ್ವಿಘ್ನವಾಗಿ ನಡೆದು, ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಲು ಹೊಸ ಚೈತನ್ಯ ದೊರಕಲಿ ಎಂದು ಆಶಿಸುತ್ತೇನೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಮಾತೃ ಸಂಸ್ಥೆ ಸಂಯುಕ್ತ ಸಹಕಾರಿ. ಇದರ 15ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 24.08.2016ರಂದು ಬೆಂಗಳೂರು ನಗರದ ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಜರುಗಿರುವುದು ಬೇರೆ ಸಹಕಾರಿಗಳಿಗೆ ಹಾಗೂ ಒಟ್ಟಾರೆ ಸಹಕಾರಿ ಕ್ಷೇತ್ರಕ್ಕೆ ಒಂದು ಮಾದರಿಯೆಂದರೆ ಅತಿಶಯೋಕ್ತಿಯೇನಲ್ಲ ಎಂದು ನನ್ನ ಭಾವನೆ.

ರಾಜ್ಯದಲ್ಲಿ ಹಾಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ 3780. ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿದವರ ಸಂಖ್ಯೆ 2388. ಇದರಲ್ಲಿ ಭಾಗವಹಿಸಿರುವವರ ಸಂಖ್ಯೆ 721 ಅಂದರೆ ಶೇಕಡಾ 30.19 ಹಾಜರಾತಿ. ಇದರ ಜೊತೆಗೆ ಪ್ರೇಕ್ಷಕರಾಗಿ ಸುಮಾರು 285 ಸೌಹಾರ್ದ ಸಹಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿರುವುದು ಸ್ವಾಗತಾರ್ಹ.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಅನೇಕ ವೈಶಿಷ್ಟ್ಯತೆಗಳಿಂದ, ಸಂಭ್ರಮಗಳಿಂದ ಜರುಗಿರುವುದು ವಿಶೇಷ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಅಗತ್ಯವಾಗುವ ತಾಂತ್ರಿಕ ಮಾಹಿತಿಯನ್ನು ಒದಗಿಸುವ ಸಹಕಾರ ತಂತ್ರಜ್ಞಾನ ಮೇಳದ ವ್ಯವಸ್ಥೆ. ಇದರಲ್ಲಿ ಅನೇಕ ಸಾಫ್ಟ್‌ವೇರ್ ಕಂಪನಿಗಳು, ಹಾರ್ಡ್‌ವೇರ್ ಕಂಪನಿಗಳು ಭಾಗವಹಿಸಿ, ತಮ್ಮ ಉತ್ಪಾದನೆ ಬಗ್ಗೆ ವಿವರಗಳನ್ನು ಮತ್ತು ಪ್ರಾಯೋಗಿಕಗಳನ್ನು ನೀಡಿರುವುದು ವಿಶೇಷ. ಸಂಯುಕ್ತ ಸಹಕಾರಿಯ ಸುಮಾರು 17 ವಿಧವಾದ ಪ್ರಕಟಣೆಗಳನ್ನು ಸೌಹಾರ್ದ ಸಹಕಾರಿಗಳ ಉಪಯೋಗಕ್ಕಾಗಿ ಪ್ರಕಟಿಸಿರುವುದನ್ನು, ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಿರುವುದನ್ನು ಸೌಹಾರ್ದ ಸಹಕಾರಿಗಳು ಪ್ರಯೋಜನ ಪಡೆದಿರುವುದು ಮತ್ತೊಂದು ವಿಶೇಷ.

ಜೊತೆಗೆ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ವಿವಿಧ ಚಟುವಟಿಕೆಗಳ ಪ್ರದರ್ಶಿನಿಗಳು ಕಾರ್ಯಕ್ರಮಕ್ಕೆ ಮೆರಗು ನೀಡುವ ವಿಶೇಷದ ಜೊತೆಗೆ ಸಾಮಾನ್ಯ ಸಭೆಯ ನಂತರ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಮತ್ತು ಠೇವಣಿದಾರರ ಹಿತರಕ್ಷಣಾ ಮಸೂದೆ" ಎಂಬ ವಿಷಯದ ಬಗ್ಗೆ ತಜ್ಞರಿಂದ ಉಪನ್ಯಾಸ ವ್ಯವಸ್ಥೆಗಳು ಸಾಮಾನ್ಯ ಸಭೆಯನ್ನು ಅತ್ಯಂತ ಉತ್ತಮ ರೀತಿಯಲ್ಲಿ ಜರುಗುವಂತೆ ಮಾಡಿದೆ ಎಂದು ಸಹಕಾರಿಗಳು ಅಭಿಪ್ರಾಯ ಸೂಚಿಸಿರುವುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಂತೋಷವನ್ನುಂಟು ಮಾಡಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಪ್ರಯತ್ನ ಸಾರ್ಥಕತೆಯನ್ನು ತಂದಿದೆ ಎಂದು ನಾನು ಭಾವಿಸುತ್ತೇನೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ, ಅರ್ಥಪೂರ್ಣ ಚರ್ಚೆಗಳನ್ನು ಮಾಡಿದ ಹಾಗೂ ಸಾಮಾನ್ಯ ಸಭೆಯ ಯಶಸ್ಸಿಗೆ ಕಾರಣರಾದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಸಲಹೆ ಹಾಗೂ ಮಾರ್ಗದರ್ಶನವನ್ನು ನಿರಂತರ ಅಪೇಕ್ಷಿಸುತ್ತೇನೆ.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಅನೇಕ ವೈಶಿಷ್ಟ್ಯತೆಗಳಿಂದ, ಸಂಭ್ರಮಗಳಿಂದ ಜರುಗಿರುವುದು ವಿಶೇಷ. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಅಗತ್ಯವಾಗುವ ತಾಂತ್ರಿಕ ಮಾಹಿತಿಯನ್ನು ಒದಗಿಸುವ ತಂತ್ರಜ್ಞಾನ ಮೇಳದ ವ್ಯವಸ್ಥೆ. ಇದರಲ್ಲಿ ಅನೇಕ ಸಾಫ್ಟ್‌ವೇರ್ ಕಂಪನಿಗಳು, ಹಾರ್ಡ್‌ವೇರ್ ಕಂಪನಿಗಳು ಭಾಗವಹಿಸಿ, ತಮ್ಮ ಉತ್ಪಾದನೆ ಬಗ್ಗೆ ವಿವರಗಳನ್ನು ಮತ್ತು ಪ್ರಾಯೋಗಿಕಗಳನ್ನು ನೀಡಿರುವುದು ವಿಶೇಷ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop


## ಒಳ ಪುಟಗಳಲ್ಲಿ . . .


ಸಂಯುಕ್ತ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆ ................ 5

ಚಿನ್ನಾಭರಣ ಸಾಲ ನೀಡುವ ವಿಧಿವಿಧಾನಗಳು ಮತ್ತು ಪ್ರಾಯೋಗಿಕ ಕುರಿತು ತರಬೇತಿ ............ 11

ಸೌಹಾರ್ದ ಸಹಕಾರಿಗಳಲ್ಲಿ ಸಾಮಾನ್ಯ ಸಭೆಗಳು............14

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 70ನೇ ಸ್ವಾತ್ರಂತ್ಯ ದಿನದ ಆಚರಣೆ ............19

"ದಿ ಲಕ್ಷ್ಮಣರಾವ ಇನಾಮದಾರ ಸಹಕಾರ ಸದನ" ಸಹಕಾರ ಭಾರತಿ, ಕರ್ನಾಟಕಕ್ಕೆ ಸ್ವಂತ ಕಛೇರಿ ಕಟ್ಟಡ ಉದ್ಘಾಟನೆ............20

ಪ್ರಶ್ನೆ – ಉತ್ತರ ............21

ಅಮಲ್ಜಾರಿ (Excution Proceedings) ಅನುಸರಿಸಬೇಕಾದ ಕ್ರಮಗಳು........22

ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 5 ............23

ದಾವಾ ಪಂಚಾಯಿತಿ ಶುಲ್ಕ ಹಾಗೂ ಅಮಲ್ಜಾರಿ ಫೀಯನ್ನು ಪರಿಷ್ಕರಿಸಿ ನಿಗದಿ ಪಡಿಸಿರುವ ಬಗ್ಗೆ ನಿಬಂಧಕರ ಅಧಿಸೂಚನೆ............24

Co Operative Movement in India and Abroad - The Road Ahead ............ 25

Reserve Bank of India News – August 2016 ............ 27


# ಸಂಪಾದಕೀಯ

## ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಮತ್ತು ಠೇವಣಿದಾರರ ಹಿತರಕ್ಷಣಾ ಮಸೂದೆ - 2015 ಮತ್ತು ಸಹಕಾರ ಸಂಸ್ಥೆಗಳು

ದೇಶದಲ್ಲಿ ಕಳೆದ ಒಂದು ದಶಕದ ಅವಧಿಯಲ್ಲಿ ಹಲವು ಚಿಟ್ ಫಂಡ್ ಕಂಪನಿಗಳು, ಸಹಾರಾ ಮತ್ತು ಪಿಎಸಿಲ್ ನಂತಹ ಕಂಪನಿಗಳು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸಿ, ಬೃಹತ್ ಪ್ರಮಾಣದಲ್ಲಿ ಮೋಸಗೊಳಿಸಿರುವಂತಹ ಅನೇಕ ಪ್ರಕರಣಗಳು ನಡೆದಿವೆ. ಇಂತಹ ಪ್ರಕರಣಗಳು ಪುನರಾವರ್ತಿಸಬಾರದು ಎಂಬ ದೃಷ್ಟಿಯಿಂದ ಇಂತಹ ಕಾಯ್ದೆಯೊಂದನ್ನು ಕೇಂದ್ರ ಸರಕಾರ ತರಲು ಉದ್ದೇಶಿಸಿರುವುದು ಮೇಲ್ನೋಟಕ್ಕೆ ಠೇವಣಿದಾರರ ಹಿತರಕ್ಷಣೆಗಾಗಿ ಇದೊಂದು ಉತ್ತಮ ಹೆಜ್ಜೆ ಎಂದು ಅಭಿಪ್ರಾಯಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರು ಹೆಚ್ಚಿನ ಬಡ್ಡಿದರದ ಆಮಿಷಗಳಿಗೆ ಒಳಗಾಗಿ ಮೋಸ ಹೋಗುವುದನ್ನು ನಿಯಂತ್ರಿಸಬಹುದಾಗಿದೆ.

ಈ ಮಸೂದೆಯ ವ್ಯಾಪ್ತಿಯಲ್ಲಿ ವ್ಯಕ್ತಿಗಳು, ವ್ಯಕ್ತಿಗಳ ಗುಂಪುಗಳು, ಮಾಲೀಕತ್ವದ ಸಂಸ್ಥೆಗಳು, ನಿಯಮಿತ ಜವಾಬ್ದಾರಿಯ ಪಾಲುದಾರಿಕಾ ಸಂಸ್ಥೆಗಳು, ಕಂಪನಿ ಅಧಿನಿಯಮ, 2013ರಡಿ ನೋಂದಣಿಯಾಗಿರುವ ಕಂಪನಿಗಳು, ಅಸೋಸಿಯೇಷನ್‌ಗಳು, ನ್ಯಾಸಗಳು ಮತ್ತು ಸಹಕಾರ ಸಂಸ್ಥೆಗಳು. ಸಹಕಾರ ಸಂಸ್ಥೆಗಳು ಸಹ ಈ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದರಿಂದ ಸಹಕಾರಿಗಳು ಇದರ ಸಾಧಕ-ಬಾಧಕಗಳ ಬಗ್ಗೆ ಚಿಂತನೆ ನಡೆಸುವುದು ಅಗತ್ಯವೆನ್ನುವ ದೃಷ್ಟಿಯಿಂದ ಸಂಯುಕ್ತ ಸಹಕಾರಿಯ 15ನೇ ಸಾಮಾನ್ಯ ಸಭೆಯ ನಂತರ ಈ ವಿಷಯದ ಬಗ್ಗೆ ಸಭೆಯನ್ನು ಏರ್ಪಡಿಸಿರುವುದು ಸಮಯೋಚಿತ.

ಸಹಕಾರಿ ಸಂಸ್ಥೆಗಳು ಸ್ವೀಕರಿಸುವ ಠೇವಣಿಗಳು ನಿಯಂತ್ರಿತ ಠೇವಣಿಯ ವ್ಯಾಪ್ತಿಯಲ್ಲಿ ಬಂದರೂ ಸಹ ಯಾವುದೇ ಸಹಕಾರಿ ಸಂಸ್ಥೆ ತಾನು ಸ್ವೀಕರಿಸುವ ಠೇವಣಿಗಳನ್ನು ಸಕಾಲದಲ್ಲಿ ಹಿಂತಿರುಗಿಸದಿದ್ದಲ್ಲಿ ಹಾಗೂ ಠೇವಣಿಗಳನ್ನು ಕ್ರೋಢೀಕರಿಸುವುದಕ್ಕೆ ಜಾಹೀರಾತುಗಳನ್ನು ನೀಡುತ್ತಿದ್ದಲ್ಲಿ ಮತ್ತು ವ್ಯಕ್ತಿಯನ್ನು ಹೂಡಿಕೆ ಮಾಡುವಂತೆ ಇನ್ನೊಬ್ಬ ವ್ಯಕ್ತಿಯನ್ನು ಪ್ರಚೋದಿಸಿ ಹೂಡಿಕೆ ಮಾಡುವಂತೆ ಅಥವಾ ಸದಸ್ಯನಾಗುವಂತೆ ಅಥವಾ ಸ್ಕೀಂಗಳಲ್ಲಿ ಭಾಗವಹಿಸುವಂತೆ ಮಾಡಿದಲ್ಲಿ ಅಂತಹವುಗಳನ್ನು ಅನಿಯಂತ್ರಿತ ಠೇವಣಿ ಯೋಜನೆ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಕಾಯ್ದೆಯಡಿಯಲ್ಲಿ ವಿಚಾರಣೆಗೆ ಅವಕಾಶವಿದೆ ಎಂಬುದು ಸಹಕಾರಿಗಳು ಗಮನಿಸುವುದು ಅವಶ್ಯಕ.

ಪ್ರಸ್ತುತ ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಸೊಸೈಟಿ ಆ್ಯಕ್ಟ್‌ನ ಕಲಂ 67ರಡಿ ಸದಸ್ಯರಿಂದಲೂ ಸಹ ಠೇವಣಿಗಳನ್ನು ಸ್ವೀಕರಿಸುವುದನ್ನು ನಿಷೇಧಿಸಲಾಗುತ್ತದೆ ಎಂದು ಅಭಿಪ್ರಾಯ ಪಡಲಾಗುತ್ತಿದೆ. ಇದರ ಬಗ್ಗೆ ಗಂಭೀರ ಚಿಂತನೆ ಅಗತ್ಯ.

ರಾಜ್ಯದಲ್ಲಿಯೂ ಸಹ ಕೆಲವು ಸಮೂಹ ಸಂಸ್ಥೆಗಳ ಹೆಸರಿನಲ್ಲಿ ನೋಂದಣಿಗೊಂಡ ಸಹಕಾರಿಗಳು, ಜನರಿಗೆ ವಂಚನೆ ಮಾಡಿರುವ ಪ್ರಕರಣಗಳು ನಡೆದಿರುವುದನ್ನು, ಸಂಯುಕ್ತ ಸಹಕಾರಿಗಳು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತೆಗೆದುಕೊಂಡಿದೆ.

ಸಹಕಾರ ಸಂಸ್ಥೆಗಳಿಗೆ ಉದ್ದೇಶಿತ ಈ ಮಸೂದೆಯಿಂದ ಅನುಕೂಲ ಮತ್ತು ಅನಾನುಕೂಲತೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆದು ಸಾಧಕ-ಬಾಧಕಗಳ ಬಗ್ಗೆ ಸಂಬಂಧಿಸಿದವರ ಗಮನಕ್ಕೆ ತರುವುದು ಮತ್ತು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಈ ಮಸೂದೆ ಪೂರಕವಾಗಬೇಕು ಎಂಬ ನಿಟ್ಟಿನಲ್ಲಿ ಸಹಕಾರಿಗಳು ಕಾರ್ಯನಿರ್ವಹಿಸುವುದು ಅಗತ್ಯ. ■



## ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಸಂಬಂಧ - ಮಗ್ನತೆ - ಉತ್ಸಾಹ

ವಸ್ತುಗಳನ್ನು ನಾವು ನೋಡುತ್ತೇವೆ. ವಸ್ತು ಅಂದರೆ ಯಾವುದು ಇದೆ ಅದು. ಅಂಥ ವಸ್ತುಗಳನ್ನು ಜೀವನದಲ್ಲಿ ಬಹಳ ನೋಡುತ್ತೇವೆ, ಅವುಗಳನ್ನು ಸಂಗ್ರಹಿಸುವುದರಲ್ಲಿ ತೊಡಗುತ್ತೇವೆ. ಅವು ವಿಯೋಗ ಆದಾಗ ದುಃಖ ಪಡುತ್ತೇವೆ. ಸದಾ ಒಂದು ವಸ್ತು ನನ್ನದಾಗಿರಲು ಈ ವಿಶ್ವದಲ್ಲಿ ಅಸಾಧ್ಯ. ಏಕೆಂದರೆ ವಸ್ತು ಸಣ್ಣದು ಇರುವುದರಿಂದ, ಪರಿಮಿತ ಆಗಿರುವುದರಿಂದ ಒಂದೇ ಸಂಬಂಧವನ್ನು ಇಟ್ಟುಕೊಳ್ಳುವುದು ಸಾಧ್ಯವಿಲ್ಲ. ಆದರೆ, ಮನುಷ್ಯ ಆ ಸಂಬಂಧ ಹಾಗೇ ಇರಬೇಕು ಎಂದು ಬಯಸುತ್ತಾನೆ. ಅದು ಈಡೇರದಿದ್ದಲ್ಲಿ ದುಃಖಿಸುತ್ತಾರೆ. ಅಸಮಾಧಾನ ಪಡುತ್ತಾನೆ. ಈ ಜಗತ್ತೆಲ್ಲಾ ಸಂಬಂಧಿತವಾಗಿದೆ. The whole world is relative. ಸಂಬಂಧರಹಿತವಾದ ವಸ್ತುವೇ ಇಲ್ಲ. ವಸ್ತುವಿನಿಂದ ಸಂಬಂಧವನ್ನು ಕಳಚಿದರೆ, ತೆಗೆದು ಹಾಕಿದರೆ, ದೂರ ಮಾಡಿದರೆ, ಬೇರ್ಪಡಿಸಿದರೆ ಅದು ಅದ್ಭುತವಾಗುತ್ತದೆ. ಪರಮ ಆಗುತ್ತದೆ.

ನಾವೀಗ ಧ್ಯಾನ ಮಾಡುತ್ತೇವೆ. ಧ್ಯಾನ ಎಂದರೇನು? ಈ ಎಲ್ಲಾ ಸಂಬಂಧಗಳಿಂದ ಹೊರಗಿರುವುದು. ಹಣವನ್ನು ಬಿಟ್ಟು, ಮನೆಯನ್ನು ಬಿಟ್ಟು, ಅಧಿಕಾರವನ್ನು ಬಿಟ್ಟು, ತಾನು ಹೆಣ್ಣು, ಗಂಡು ಎಂಬುದನ್ನು ಬಿಟ್ಟು ನೋಡಿದರೆ ನಾನು ಯಾರು? ಹೊರಗಿರುವುದನ್ನು ಎಲ್ಲಾ ತೆಗೆದು ತೆಗೆದು ಆಮೇಲೆ ಉಳಿಯುತ್ತದೆಯಲ್ಲ ಅದು ಧ್ಯಾನ. ಅದು ನೈಜ ಅವಸ್ಥೆ, ಸ್ಥಿತಿ. ಅದು ಸತ್ಯಕ್ಕೆ ಸಮೀಪ ಆಗಿರುತ್ತದೆ. ಬಸವಣ್ಣನವರು ಎಷ್ಟು ಸುಂದರವಾಗಿ ವಚನಗಳಲ್ಲಿ ಹೇಳಿದ್ದಾರೆ...

ನೆಲವೊಂದೆ, ಹೊಲಗೇರಿ ಶಿವಾಲಯಕ್ಕೆ;
ಜಲವೊಂದೆ ಶೌಚಾಚಮನಕ್ಕೆ;
ಕುಲವೊಂದೆ ತನ್ನತಾನರಿದವಂಗೆ;
ಫಲವೊಂದೆ ಷಡುದರುಶನ ಮುಕ್ತಿಗೆ;
ನಿಲವೊಂದೆ, ಕೂಡಲಸಂಗಮದೇವಾ ನಿಮ್ಮನರಿದವಂಗೆ!

ಮುಳುಗಬೇಕು, ಏಳುವ ಹಾಗೆ ಮುಳುಗಬೇಕು, ಮುಳುಗೇ ಹೋಗಬಾರದು. ಯಾವುದರಲ್ಲಿ ಮುಳುಗಿದರೆ ಜೀವನ ಪವಿತ್ರ ಆಗುತ್ತದೆ. ಅದರಲ್ಲಿ ಎಷ್ಟು ಮುಳುಗಬೇಕೋ ಅಷ್ಟು ಮುಳಗಬೇಕು.

ಭಕ್ತ ಮುಳುಗುತ್ತಾನೆ... ಎಲ್ಲಿ ಮುಳುಗಿದರೆ ಸಂತೋಷ ಸಿಗುತ್ತದೆ, ಮನಸ್ಸು ಅರಳುತ್ತದೆ ಅಲ್ಲಿ ಮುಳುಗುತ್ತಾನೆ. ಮನುಷ್ಯನಿಗೆ ಉತ್ಸಾಹ ಬೇಕು. ಇಲ್ಲ ಅಂದರೆ ಜೀವನದಲ್ಲಿ ದೊಡ್ಡ ಸಂಗತಿ ಸಾಧಿಸಲಿಕ್ಕೆ ಸಾಧ್ಯವಿಲ್ಲ. ಎಲ್ಲಿ ಉತ್ಸಾಹ ತೋರಬೇಕೋ ಅಲ್ಲಿ ಉತ್ಸಾಹ ತೋರಬೇಕು. ಒಳ್ಳೆಯದನ್ನು ಮಾಡಲು, ಬದುಕಿನ ಸುಂದರ ತೋಟ ಬೆಳೆಸಲು ಉತ್ಸಾಹ ಇರಬೇಕು. ಭಕ್ತಿಯ ಪೀಯೂಷ ಕುಡಿದರೆ, ಅಮೃತ ಕುಡಿದರೆ ಸಿದ್ಧಃ ಭವತಿ, ಅಮೃತಃ ಭವತಿ, ತೃಪ್ತಃ ಭವತಿ, ನ ವಾಂಛದಿ, ನ ಶೋಚದಿ, ನ ದ್ವೇಷ್ಠಿ, ನ ರಮತೆ, ನೋತ್ಸಾಹಿ ಭವತಿ.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ

ಸೌಹಾರ್ದ ಸಹಕಾರಿಗಳಿಗಾಗಿ ಕರ್ನಾಟಕ ಘನ ಸರ್ಕಾರದಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 441ರಡಿ ಮಂಜೂರಾಗಿರುವ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಅಧಿಕ ಪ್ರಭಾರ ನ್ಯಾಯಾಧೀಶರಾಗಿ ಜಂಟಿ ನಿಬಂಧಕರಾದ ಶ್ರೀ ಕೆ.ಎಲ್.ನರಸಿಂಹಮೂರ್ತಿಯವರು ಕಾರ್ಯನಿರ್ವಹಿಸುತ್ತಿದ್ದು, ಪೂರ್ಣಾವಧಿ ಪೀಠಾಧಿಕಾರಿಯಾಗಿ ಶ್ರೀಮತಿ ಕೆ.ಎಂ.ಆಶಾ, ಜಂಟಿ ನಿಬಂಧಕರು ನೇಮಕವಾಗಿದ್ದಾರೆ. ಈಗಾಗಲೇ ಸೌಹಾರ್ದ ಸಹಕಾರಿಗಳು ಸಂಬಂಧಿಸಿದ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಿಸಲಾಗಿರುವ ಪ್ರಕರಣಗಳನ್ನು ಸದರಿ ನ್ಯಾಯಾಲಯಕ್ಕೆ ಶೀಘ್ರವಾಗಿ ವರ್ಗಾಯಿಸಲು ಅಗತ್ಯ ಕ್ರಮವಿಡಲಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸೌಹಾರ್ದ ಸಹಕಾರಿಗಳಲ್ಲಿನ ವಿವಾದಗಳನ್ನು **ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055** ಈ ವಿಳಾಸಕ್ಕೆ ಕಳುಹಿಸಿ, ದಾಖಲಿಸಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ : 080–23449933/34. ಇ–ಮೇಲ್ : 441court@souharda.coop.

| **ವಿವಾದಗಳ ದಾಖಲಾತಿ** | | **ಸಂಬಂಧಿಸಿದ ಅಧಿಕಾರಿ** |
|---|---|---|
| ಬೆಳಗಾವಿ ವಿಭಾಗದ ಜಿಲ್ಲೆಗಳು | – | ಶ್ರೀ ರಾಚಯ್ಯ ಸಿ. ಹಿರೇಮಠ – 8884460278 |
| ಕಲಬುರಗಿ, ಬೆಂಗಳೂರು ಹಾಗೂ ಮೈಸೂರು ವಿಭಾಗದ ಜಿಲ್ಲೆಗಳು | – | ಶ್ರೀ ವಿನೋದ್ ಕುಮಾರ್ ತಗಾರೆ – 9449274481 |

ಇವರಲ್ಲಿ ತಮ್ಮ ದಾವೆಗಳನ್ನು ದಾಖಲಿಸಿ.

## ಕ್ಯಾಂಪ್ಕೋಗೆ 2014-15ರ ಎಕ್ಸ್‌ಪೋರ್ಟ್ ಎಕ್ಸಲೆನ್ಸಿ ಅವಾರ್ಡ್

2014–15ರ ಎಕ್ಸ್‌ಪೋರ್ಟ್ ಎಕ್ಸಲೆನ್ಸಿ ಅವಾರ್ಡ್ ಕ್ಯಾಂಪ್ಕೋಗೆ ಲಭ್ಯವಾದ ಹಿನ್ನೆಲೆಯಲ್ಲಿ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಂದ ಸ್ವೀಕರಿಸಿದರು.



# ಸಂಯುಕ್ತ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆ

## ಸೌಹಾರ್ದ ಸಹಕಾರಿಗಳ ಸಕ್ರಿಯ ಭಾಗವಹಿಸುವಿಕೆ ಕ್ಷೇತ್ರದ ಅಭಿವೃದ್ಧಿಯ ದಿಕ್ಸೂಚಿ



**ಬೆಂಗಳೂರು :** ಸಂಯುಕ್ತ ಸಹಕಾರಿಯ 15ನೇ ಸಾಮಾನ್ಯ ಸಭೆ ದಿನಾಂಕ : 24.08.2016ರಂದು ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಮಾನ್ಯ ಅಧ್ಯಕ್ಷರ ಭಾಷಣ ಹಾಗೂ ಶ್ರೀ ರಾಮಾನುಜಮ್‌ರವರ ಸಹಕಾರ ಗೀತೆಯೊಂದಿಗೆ ಸಾಮಾನ್ಯ ಸಭೆಯನ್ನು ಪ್ರಾರಂಭಿಸಲಾಯಿತು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ, ಎಲ್ಲಾ ನಿರ್ದೇಶಕರಿಗೆ ಸಾಮಾನ್ಯ ಸಭೆಯ ಪ್ರತಿನಿಧಿಗಳಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ಸ್ವಾಗತ ಕೋರಿದರು. ನಂತರ ದೇಶದ ರಕ್ಷಣೆಗಾಗಿ ಮಡಿದ ಯೋಧರ, ಆತ್ಮಹತ್ಯೆ ಮಾಡಿಕೊಂಡ ರೈತರ, ಕಾಶ್ಮೀರ ನೆರೆ ಪೀಡಿತರ, ಪ್ರಸಕ್ತ ಸಾಲಿನಲ್ಲಿ ನಮ್ಮನ್ನಗಲಿದ ಕೆಲವಾರು ಸಹಕಾರಿ ಮುಖಂಡರ ಆತ್ಮಕ್ಕೆ ಶಾಂತಿ ಕೋರುವ ಒಂದು ನಿಮಿಷದ ಮೌನಾಚರಣೆಯನ್ನಾಚರಿಸಲಾಯಿತು.

## ಪ್ರಗತಿಗೆ ಸಹಕರಿಸಿದ ಸೌಹಾರ್ದ ಸಹಕಾರಿಗಳಿಗೆಲ್ಲ ಕೃತಜ್ಞತೆ - ಅಧ್ಯಕ್ಷರ ಭಾಷಣ



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು 15ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಆಗಮಿಸಿರುವ ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಸಂತೋಷದಿಂದ ಹಾರ್ದಿಕ ಸ್ವಾಗತ ಕೋರಿದರು.

ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದ, ಸಹಕಾರ ಕ್ಷೇತ್ರದಲ್ಲಿ ಸಾಧನೆಗೆ ಆಕಾಶದೆತ್ತರದ ಅವಕಾಶಗಳಿವೆ ಎಂಬುದನ್ನು ಸಹಕಾರಿಗಳಿಗೆ ತೋರಿಸಿದ ಸೌಹಾರ್ದ ಸಹಕಾರಿ ಕ್ಷೇತ್ರದ ಕಳೆದ 15 ವರ್ಷಗಳ ಸಾಧನೆ ಗಮನಾರ್ಹ ಹಾಗೂ ಸಾಧಕರು ಅಭಿನಂದನಾರ್ಹರು. ಸಾಧನೆಗಳಿಗೆ ಇನ್ನೂ ಹೆಚ್ಚಿನ ಅವಕಾಶಗಳಿವೆ ಎಂಬುದು ಅಷ್ಟೇ ಸತ್ಯ. ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ವ್ಯಾಪಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 163 ತಾಲ್ಲೂಕುಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ವ್ಯಾಪಿಸಿದೆ. ಸಾರ್ವಜನಿಕರ ಗಮನ ಸೆಳೆದಿದೆ. ಸರಕಾರದ ಗಮನ ಸೆಳೆದಿದೆ. ರಾಜ್ಯ ಹಾಗೂ ರಾಷ್ಟ್ರವ್ಯಾಪಿ ಸಹಕಾರಿಗಳ ಗಮನ ಸೆಳೆದಿದೆ. ಸಮಗ್ರ ಸಹಕಾರ ಕ್ಷೇತ್ರದಲ್ಲಿ ಹೊಸ ಚೈತನ್ಯ ಹಾಗೂ ಸಂಚಲನ ಮೂಡಿಸಿದೆ. ಸಹಕಾರ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿದೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ತೊಡಗಿಸಿ ಕೊಳ್ಳುತ್ತಿರುವುದು ಸ್ವಾಗತಾರ್ಹ ಹಾಗೂ ಸಂತೋಷದಾಯಕವಾಗಿದೆ. ಈ ಚಳುವಳಿಯಿಂದ ಸಹಸ್ರಾರು ಯುವ ಸಹಕಾರಿ ನಾಯಕರು ಹೊರಹೊಮ್ಮಿದ್ದಾರೆಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಈ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸಿದ, ಶ್ರಮಿಸುತ್ತಿರುವ ಹಾಗೂ ಸಹಕರಿಸುತ್ತಿರುವ ತಮಗೆ ಹಾಗೂ ಎಲ್ಲಾ ಸಹಕಾರಿ ಬಂಧುಗಳಿಗೆ ಮತ್ತು ಸಹಕರಿಸುತ್ತಿರುವ ಎಲ್ಲಾ ಅಧಿಕಾರಿ ವರ್ಗದವರಿಗೆ ಅಭಿನಂದನೆಗಳನ್ನು ತಿಳಿಸಿದರು.

### ಭಾಷಣದ ಮುಖ್ಯಾಂಶಗಳು

**ಸೌಹಾರ್ದ ಸಹಕಾರಿಗಳ ಬೆಳವಣಿಗೆ :** ಪ್ರಸಕ್ತ ಸಾಲಿನಲ್ಲಿ 407 ಹೊಸ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಸದಸ್ಯತ್ವ ಪಡೆದಿವೆ. ಈ ವರ್ಷದಲ್ಲಿ ಹೆಚ್ಚಿಗೆ ಸೌಹಾರ್ದ ಸಹಕಾರಿಗಳ ನೋಂದಣಿಯಾಗಿವೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ನಿರೀಕ್ಷೆಗಿಂತ ಹೆಚ್ಚಿದೆ. ಸಹಕಾರಿ ಇಲಾಖೆ ಹಾಗೂ ಸಾರ್ವಜನಿಕರು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಹಕರಿಸಿದರೆ ಬೆಳವಣಿಗೆಯ ವೇಗ ಇನ್ನೂ ಹೆಚ್ಚುವ ಸಾಧ್ಯತೆ ಇದೆ. ಈ ಸಂಖ್ಯಾತ್ಮಕ ಬೆಳವಣಿಗೆಯ ಜೊತೆಗೆ ಗುಣಾತ್ಮಕ ಬೆಳವಣಿಗೆಗೂ ಸಂಯುಕ್ತ ಸಹಕಾರಿಯು ಆದ್ಯತೆಯನ್ನು ನೀಡುತ್ತಾ ಬಂದಿದೆ.



ನೋಂದಣಿ



ತಂತ್ರಜ್ಞಾನ ಮೇಳ ಉದ್ಘಾಟನೆ

**ಇ-ಸ್ಟ್ಯಾಂಪಿಂಗ್ ಕೇಂದ್ರಗಳು – ಸಾವಿರದತ್ತ ದಾಪುಗಾಲು :** ದೇಶದಲ್ಲಿ ಸಹಕಾರ ಕ್ಷೇತ್ರದಲ್ಲಿ ಪ್ರಪ್ರಥಮವಾಗಿ ಇ-ಸ್ಟ್ಯಾಂಪಿಂಗ್ ಕೇಂದ್ರವನ್ನು ಪ್ರಾರಂಭಿಸಿದ ಕೀರ್ತಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಲ್ಲುತ್ತದೆ. ಈ ಅವಕಾಶವನ್ನು ಒದಗಿಸಿದ ಕರ್ನಾಟಕ ಸರಕಾರಕ್ಕೆ ಸಹಕಾರಿಗಳೆಲ್ಲರ ಪರವಾಗಿ ಧನ್ಯವಾದಗಳು. ಇಂದು ಇ–ಸ್ಟ್ಯಾಂಪಿಂಗ್ ಕೇಂದ್ರಗಳ ಸಂಖ್ಯೆ 950 ಕ್ಕಿಂತ ಹೆಚ್ಚಿಗೆ ಇದ್ದು, 1000 ತಲುಪಲು ದಾಪುಗಾಲು ಹಾಕುತ್ತಿದೆ. ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ ರೂ.1.25 ಕೋಟಿಗಿಂತಲೂ ಹೆಚ್ಚು ರಾಜಸ್ವವನ್ನು ಈ ಸೌಹಾರ್ದ ಸಹಕಾರಿ ಕ್ಷೇತ್ರ ನೀಡುತ್ತಿರುವುದು ಸೌಹಾರ್ದ ಸಹಕಾರಿಗಳು ಹೆಮ್ಮೆ ಪಡುವ ವಿಷಯ.

**ಸಂಯುಕ್ತ ಸಹಕಾರಿಯ ಕಾರ್ಯ– ವಿಭಾಗೀಯ ಕಛೇರಿಗಳು – ಸಿಬ್ಬಂದಿಯ ನೇಮಕಾತಿ :** ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಾದಂತೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ ವಿಸ್ತೃತೆ ಹೆಚ್ಚಿಗೆ ಆಗುವುದು ಸಹಜ. ಅದಕ್ಕಾಗಿ ಸಂಯುಕ್ತ ಸಹಕಾರಿಯು ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಪ್ರತ್ಯೇಕ ವಿಭಾಗೀಯ ಕಛೇರಿಗಳನ್ನು ಪ್ರಾರಂಭಿಸಿದೆ. 2 ರಿಂದ 3 ಜಿಲ್ಲೆಗಳಿಗೆ ಒಬ್ಬರಂತೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರನ್ನು ನೇಮಿಸಿದೆ.

**ಶಾಸನಬದ್ಧ ಕಾರ್ಯಗಳ ಜೊತೆಗೆ ಪರಿಣಾಮಕಾರಿ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳ ನಿರ್ವಹಣೆ :** ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ದತ್ತವಾಗಿರುವ ಅಧಿಕಾರ ವ್ಯಾಪ್ತಿಯಲ್ಲಿ ಶಾಸನಬದ್ಧ ಕಾರ್ಯವನ್ನು ನಿರ್ವಹಿಸುವ ಜೊತೆಗೆ ಪರಿಣಾಮಕಾರಿ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯವ್ಯಾಪಿ ಹಮ್ಮಿಕೊಳ್ಳುತ್ತಾ ಬಂದಿದೆ. ತರಬೇತಿ ವಿಷಯಕ್ಕೆ ಸಂಬಂಧಿಸಿದಂತೆ 1, 2, 3, 5, 7, 10 ದಿನಗಳ ವಿವಿಧ ಹಾಗೂ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಅಧ್ಯಯನ ಯೋಗ್ಯ ಕ್ಷೇತ್ರವಾಗಿ ಸೌಹಾರ್ದ ಸಹಕಾರಿ ಕ್ಷೇತ್ರ :** ರಾಷ್ಟ್ರೀಯ ಸಹಕಾರ ಯೂನಿಯನ್ ಹಾಗೂ ವೈಕುಂಠ ಮೆಹತಾ ಇನ್ಸ್‌ಟಿಟ್ಯೂಟ್ ವತಿಯಿಂದ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಅಲ್ಲದೇ, ಈ ಕ್ಷೇತ್ರವನ್ನು ಅಧ್ಯಯನ ಮಾಡಲು ಎಂ.ಬಿ.ಎ ವಿದ್ಯಾರ್ಥಿಗಳು ಬರುತ್ತಿರುವುದು ನಮಗೆಲ್ಲ ಸಂತೋಷದ ವಿಷಯವೆಂದು ಭಾವಿಸಿದ್ದೇನೆ.

### ಯುವ ಸಹಕಾರಿಗಳ ಸಂವಾದ ಕಾರ್ಯಕ್ರಮ

**ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠ ಸ್ಥಾಪನೆ : ದತ್ತಿ ಉಪನ್ಯಾಸಗಳ ಚಿಂತನೆ :** ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಗೆ ಹೆಚ್ಚು ಯುವಕರನ್ನು ಬರಮಾಡಿಕೊಳ್ಳುವ ದೃಷ್ಟಿಯಿಂದ ಯುವಕರ ಹಂತದಲ್ಲಿ ಪ್ರಾರಂಭದಲ್ಲಿಯೇ ಸೌಹಾರ್ದ ಸಹಕಾರಿ ಕ್ಷೇತ್ರದ ಮಾನಸಿಕತೆಯನ್ನು ಬೆಳೆಸುವ ದೃಷ್ಟಿಯಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಯುವಕರು ಹಾಗೂ ಸಹಕಾರ ಕುರಿತಾದ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಕುಲಸಚಿವರುಗಳು ವಿವಿಧ ವಿಷಯಗಳ ಮುಖ್ಯಸ್ಥರು, ಪತ್ರಕರ್ತರು, ಸ್ಥಳೀಯ ಸಹಕಾರಿಗಳು ಭಾಗವಹಿಸುವಂತೆ ಕ್ರಮವಿಡಲಾಗುತ್ತಿದೆ. ಈ ಕಾರ್ಯಕ್ರಮಗಳು ಬಹಳ ಉತ್ತಮವಾಗಿ ನಡೆಯುತ್ತಿವೆ. ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಕಾರ್ಯಕ್ರಮ ನಡೆದಿರುವ ವಿಶ್ವವಿದ್ಯಾನಿಲಯಗಳಲ್ಲಿ ಸಹಕಾರ ಕುರಿತು ಅಧ್ಯಯನ ಪೀಠ ಸ್ಥಾಪನೆಗೆ ಹಾಗೂ ದತ್ತಿ ಉಪನ್ಯಾಸಗಳನ್ನು ಪ್ರಾರಂಭಿಸುವುದಕ್ಕೆ ಕ್ರಮವಿಡಲಾಗುತ್ತಿದೆ.

**ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗೆ ಕ್ರಮ :** ಕರ್ನಾಟಕ ಸರಕಾರ 2014ರಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡುವಾಗ ಸೌಹಾರ್ದ ಸಹಕಾರಿಗಳ ದಿನ ನಿತ್ಯದ ಆಡಳಿತ ವ್ಯವಸ್ಥೆಯಲ್ಲಿ ಆಗಿರುವ ಕೆಲವು ತೊಂದರೆಗಳನ್ನು ಸರಕಾರದ ಗಮನಕ್ಕೆ ತರಲಾಗಿದೆ. ಸಹಕಾರಿ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಬೆಳೆಯಲು ಅಗತ್ಯವಿರುವ, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಪೂರಕವಾಗಿ ಸಹಕಾರಿಗಳ ಸ್ವಾಯತ್ತತೆಯನ್ನು ಎತ್ತಿ ಹಿಡಿಯುವ ಸಹಕಾರಿ ವ್ಯವಸ್ಥೆಯ ರಚನೆಗೆ ಸರಕಾರ ಸ್ಪಂದಿಸುವುದು ಅಗತ್ಯವೆಂದು ಭಾವಿಸಿ, ಸಂಬಂಧಿಸಿದವರಲ್ಲಿ ಚರ್ಚಿಸಿ, ಮನವಿ ಸಲ್ಲಿಸಿದ ಪರಿಣಾಮವಾಗಿ ಕೆಲವು ತಿದ್ದುಪಡಿಗಳು ಆಗಿವೆ. ಇನ್ನೂ ಕೆಲವು ಅವಶ್ಯಕ ತಿದ್ದುಪಡಿಗಳು ಬಾಕಿ ಇವೆ. ಈ ಬಗ್ಗೆ ನಮ್ಮ ಪ್ರಯತ್ನ ಜಾರಿ ಇದೆ.

**ಪತ್ರಿಕಾ ಗೋಷ್ಠಿಗಳು :** ಸಂಯುಕ್ತ ಸಹಕಾರಿಯು ಏರ್ಪಡಿಸಿದ ತರಬೇತಿ ಕಾರ್ಯಕ್ರಮಗಳ ಪೂರ್ವದಲ್ಲಿ ಮತ್ತು ಸಂಪರ್ಕ ಸಭೆ ಇತ್ಯಾದಿ ಕಾರ್ಯಕ್ರಮಗಳ ಪೂರ್ವದಲ್ಲಿ ಹಾಗೂ ಸಂಯುಕ್ತ ಸಹಕಾರಿಯು ಅನೇಕ ವಿಶೇಷ ಸಂದರ್ಭಗಳನ್ನು ಬಳಸಿಕೊಂಡು ಪತ್ರಿಕಾ ಗೋಷ್ಠಿಗಳನ್ನು ಏರ್ಪಡಿಸುತ್ತಾ ಬಂದಿದೆ. ಈ ಕ್ಷೇತ್ರದ ಅಭಿವೃದ್ಧಿಗಾಗಿ, ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದ, ಸಾರ್ವಜನಿಕರ ಹಾಗೂ ಸಹಕಾರಿಗಳ ಗಮನ ಸೆಳೆಯುವ ಉದ್ದೇಶದಿಂದ ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಪ್ರಚುರ ಪಡಿಸುವ ದೃಷ್ಟಿಯಿಂದಲೂ ಪತ್ರಿಕಾಗೋಷ್ಠಿಗಳನ್ನು ನಡೆಸಲಾಗುತ್ತಿದೆ.

**ದೂರ ಶಿಕ್ಷಣದ ಮೂಲಕ ಸಹಕಾರ ಡಿಪ್ಲೋಮಾ ತರಬೇತಿ :** ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳಲ್ಲಿ ನುರಿತ ಹಾಗೂ ಕೌಶಲ್ಯವುಳ್ಳ ಸಿಬ್ಬಂದಿಯವರು ಇಲ್ಲದಿರುವುದನ್ನು ಸಂಯುಕ್ತ ಸಹಕಾರಿ ಗಮನಿಸಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ನುರಿತ ತರಬೇತಿ ಪಡೆದ ಕೆಲಸದ ಜ್ಞಾನವುಳ್ಳ ಸಿಬ್ಬಂದಿಯನ್ನು

ಸೌಹಾರ್ದ ಸಹಕಾರಿಗಳು ಹೊಂದುವುದು ಅವಶ್ಯಕ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಶಿಕ್ಷಣ, ತರಬೇತಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ ಹಾಗೂ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರೊಂದಿಗೆ ದೂರ ಶಿಕ್ಷಣದ ಮೂಲಕ 3 ತಿಂಗಳು ಅವಧಿಯ ಸಹಕಾರಿ ಡಿಪ್ಲೋಮಾ ಪ್ರಾರಂಭಿಸಲು ಸಂಪರ್ಕಿಸಲಾಗಿದೆ.

**ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು :** ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರಿಗಾಗಿ ಕೌಶಲ್ಯ ಅಭಿವೃದ್ಧಿ ಡೆವಲಪ್‌ಮೆಂಟ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಿದ್ಧತೆ ನಡೆದಿದೆ. ಸಿಬ್ಬಂದಿಯವರುಗಳನ್ನು ಹಿರಿಯ ಕಿರಿಯ ಸಿಬ್ಬಂದಿಯವರಾಗಿ ವಿಭಜಿಸಿ ಅವರಿಗೆ ಅನ್ವಯಿಸುವ ವಿಷಯಗಳ ಆಯ್ಕೆ ಮಾಡಿ ಅವರಲ್ಲಿ ಕೌಶಲ್ಯಗಳನ್ನು ಗುರುತಿಸಿ, ಅವುಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಈ ಬಗ್ಗೆ ಸಲಹೆ ಹಾಗೂ ಸಹಕಾರಗಳನ್ನು ಅಪೇಕ್ಷಿಸಿದೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮೌಲ್ಯಮಾಪನ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮೌಲ್ಯಮಾಪನವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ವಹಿಸಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ರಾಜ್ಯದ ಸುಮಾರು 200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದ್ದಾರೆ. ಅನೇಕ ಹಿರಿಯ ಸಹಕಾರಿ ಮುಖಂಡರನ್ನು, ಅಧಿಕಾರಿಗಳನ್ನು ಭೇಟಿ ಮಾಡಿ, ಸೌಹಾರ್ದ ಸಹಕಾರಿ ಕ್ಷೇತ್ರದ ಚಟುವಟಿಕೆಗಳ ಬಗ್ಗೆ ಚರ್ಚಿಸಿದ್ದಾರೆ. ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಂಡಿದೆ. ಪ್ರಾಥಮಿಕ ವರದಿಯನ್ನು ಸಲ್ಲಿಸಿದ್ದಾರೆ. ಚರ್ಚೆ ಹಾಗೂ ಅಂತಿಮ ವರದಿ ಸಲ್ಲಿಸುವುದು ಮಾತ್ರ ಬಾಕಿ ಇದೆ.

**ಸಾಕ್ಷ್ಯ ಚಿತ್ರ ನವೀಕರಣ :** ರಾಜ್ಯದ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರಚಾರಕ್ಕಾಗಿ ಒಂದು ಸಾಕ್ಷ್ಯ ಚಿತ್ರವನ್ನು ಕಳೆದ 2 ವರ್ಷಗಳ ಹಿಂದೆಯಷ್ಟೇ ಸಿದ್ಧಪಡಿಸಲಾಗಿತ್ತು. ಮಾನ್ಯ ಸಹಕಾರ ಸಚಿವರು, ಮಾನ್ಯ ನಿಬಂಧಕರು ಹಾಗೂ ಇನ್ನೂ ಕೆಲವು ಗಣ್ಯರ ಅಭಿಪ್ರಾಯವನ್ನು ಈ ಸಾಕ್ಷ್ಯ ಚಿತ್ರದಲ್ಲಿ ಅಳವಡಿಸುವುದು ಅಗತ್ಯವಾಗಿರುವುದನ್ನು ಮನಗಂಡು ಸಾಕ್ಷ್ಯ ಚಿತ್ರ ನವೀಕರಣ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯ ಪ್ರಗತಿಯಲ್ಲಿದೆ.

**ಕಾಮನ್ ಸಾಫ್ಟ್‌ವೇರ್ ಮತ್ತು ಏಕರೂಪ ಕಾರ್ಯವಿಧಾನಕ್ಕಾಗಿ ನಮೂನೆಗಳ ಸಿದ್ಧತೆ :** ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಅಳವಡಿಸಿಕೊಳ್ಳಲು ಸಾಧ್ಯವಾಗುವಂತೆ ಕಾಮನ್ ಸಾಫ್ಟ್‌ವೇರ್ ಸಿದ್ಧಪಡಿಸಲು ಆಲೋಚಿಸಲಾಗುತ್ತಿದೆ. ಇದರ ಜೊತೆಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಉಪಯೋಗಿಸಬಹುದಾದ ಮುದ್ದತಿ ಠೇವಣಿ ಅರ್ಜಿ, ಪ್ರಾಮಿಸರಿ ನೋಟ್, ಸಾಲದ ಅರ್ಜಿ, ಸಮ್ಮತಿ ಪತ್ರ, ಮುದ್ದತಿ ರಿಕವರಿಂಗ್ ಪಿಗ್ಮಿ, ಆಭರಣದ ಸಾಲದ ಅರ್ಜಿ, ಗ್ರಹನಾಧಿಕಾರ ಉತ್ತರಾಧಿಕಾರ ಅರ್ಜಿ, ವಚನ ಪತ್ರದ ಭದ್ರತಿ ಅರ್ಜಿ, ಜಾಮೀನುದಾರರ ಅರ್ಜಿ, ಪಿಗ್ಮಿ ಪ್ರಾರಂಭದ ಅರ್ಜಿ, ಖಾತೆ ಮುಕ್ತಾಯಗೊಳಿಸುವ ಅರ್ಜಿ, ವರ್ಗಾವಣೆ ಖರ್ಚಿನ ಪಾವತಿ, ಚಾಲ್ತಿ ಪಿಗ್ಮಿ ಓಡಿ ಜಮಾ ಸ್ಲಿಫ್, ಸಾಲ ಖಾತೆ ಜಮಾ ಸ್ಲಿಫ್, ನಗದು ಪಾವತಿ, ಸಾಲದ ಕಾರ್ಡ್, ಆರ್.ಡಿ. ಬುಕ್, ಡಿ.ಡಿ. ಸ್ಲಿಫ್, ಎಸ್.ಬಿ. ಪಾಸ್ ಬುಕ್, ಎನ್‌ವಲಪ್ ಕವರ್, ವಿತ್‌ಡ್ರಾ ಸ್ಲಿಫ್ ಪ್ಯಾಡ್, ಎಫ್.ಡಿ. ಬಾಂಡ್, ಕ್ಯಾಶ್ ಸರ್ಟಿಫೀಕೇಟ್, ಶೇರು ಪ್ರಮಾಣ ಪತ್ರ, ಕ್ಯಾಶ್‌ಸ್ಕ್ರೋಲ್ ಬುಕ್, ಉಳಿತಾಯ ಖಾತೆ ಓಚರ್, ಎಸ್.ಬಿ.ಪಾಸ್ ಬುಕ್ ಕವರ್, ಲೆಟರ್ ಪ್ಯಾಡ್, ಬಳಕೆ ಸಾಲದ ಒಡಂಬಡಿಕೆ ಪತ್ರ, ವ್ಯಾಪಾರಿ ಸಾಲದ ಒಡಂಬಡಿಕೆ ಪತ್ರ, ಪಿಗ್ಮಿ ಪಾಸ್ ಬುಕ್, ಎಫ್.ಡಿ. ಬಾಂಡ್ ಕವರ್, ಸದಸ್ಯತ್ವದ ಅರ್ಜಿ, ನಾಮಮಾತ್ರ ಸದಸ್ಯತ್ವದ ಅರ್ಜಿ ಇತ್ಯಾದಿಗಳಿಗೆ ನಮೂನೆಗಳನ್ನು ಸಿದ್ಧಪಡಿಸಿದೆ. ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ಏಕರೂಪ ಕಾರ್ಯವಿಧಾನವನ್ನು ಪಾಲಿಸುವ ಮೂಲಕ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಗುಣಮಟ್ಟವನ್ನು ನಿರೀಕ್ಷಿಸಬಹುದಾಗಿದೆ.

**ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳು :** ರಾಜ್ಯದ ಸೌಹಾರ್ದ ಸಹಕಾರಿಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಸೌಹಾರ್ದ ಸಹಕಾರಿಗಳಲ್ಲಿ ಹಣ ಹೂಡಿಕೆ ಮಾಡುವವರಿಗೆ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡಿಕೊಂಡು ಹೂಡಿಕೆ ಮಾಡುವಂತೆ ಜಾಗೃತಿ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಹಮ್ಮಿಕೊಳ್ಳಲಾಗುತ್ತಿದೆ. ಹೂಡಿಕೆದಾರರ ಜಾಗೃತಿ ಸಂಯುಕ್ತ ಸಹಕಾರಿಯ ಕಾಳಜಿ ಎಂಬ ಘೋಷ ವಾಕ್ಯದೊಂದಿಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಿದೆ.

**ಅಧ್ಯಯನ ಪ್ರವಾಸ :** ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಕಳೆದ ಬಾರಿ 10 ದಿನಗಳ ಅಂತರರಾಜ್ಯ ಅಧ್ಯಯನ ಪ್ರವಾಸವನ್ನು ಕರ್ನಾಟಕ, ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ಅಧ್ಯಯನ ತರಬೇತಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿತ್ತು. ಪ್ರಸಕ್ತ



ಗಣ್ಯರಿಂದ ಪ್ರದರ್ಶಿನಿಗಳ ವೀಕ್ಷಣೆ



ತಂತ್ರಜ್ಞಾನ ಮೇಳ ವೀಕ್ಷಣೆ



ಪ್ರಶ್ನೋತ್ತರ

ಸಾಲಿನಲ್ಲೂ ಸಹ ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ 7 ದಿನಗಳ ಪ್ರವಾಸ ಮತ್ತು ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ 7 ದಿನಗಳು ಹೀಗೆ 2 ತಂಡಗಳಲ್ಲಿ ಈ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗಿದೆ. ಸೌಹಾರ್ದ ಸಹಕಾರಿಗಳು ಇದರ ಪ್ರಯೋಜನ ಪಡೆದುಕೊಳ್ಳಲು ಕೋರಿದೆ.

**ನೇರ ತೆರಿಗೆ ಸಂಹಿತೆ, ಆದಾಯ ತೆರಿಗೆ ಇಲಾಖೆಯ ಕಿರುಕುಳ ಇತ್ಯಾದಿಗಳಿಗಾಗಿ ಕೇಂದ್ರ ಹಣಕಾಸು ಸಚಿವರ, ಕೃಷಿ ಸಚಿವರ ಹಾಗೂ ಕೇಂದ್ರ ವಾಣಿಜ್ಯ ಹಾಗೂ ಉದ್ದಿಮೆ ಸಚಿವರ ಮತ್ತು ಸಿ.ಬಿ.ಡಿ.ಟಿ. ಅಧ್ಯಕ್ಷರ ಭೇಟಿ :** ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯವರು ನೋಟೀಸ್‌ಗಳನ್ನು ನೀಡಿ ಕಿರುಕುಳ ಕೊಡುವುದನ್ನು ತಪ್ಪಿಸುವ ಸಲುವಾಗಿ ಮಾನ್ಯ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿ, ಮಾನ್ಯ ಕೇಂದ್ರ ವಾಣಿಜ್ಯ ಹಾಗೂ ಉದ್ದಿಮೆ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಹಾಗೂ ಮಾನ್ಯ ಕೃಷಿ ಹಾಗೂ ಸಹಕಾರ ಸಚಿವರಾದ ಶ್ರೀ ರಾಧಾಮೋಹನ ಸಿಂಗ್ ಹಾಗೂ ಕೇಂದ್ರ ನೇರ ತೆರಿಗೆ ಸಲಹಾ ಮಂಡಳಿಯ ಅಧ್ಯಕ್ಷರನ್ನು ನಿಯೋಗದೊಂದಿಗೆ ಭೇಟಿ ಮಾಡಲಾಗಿದೆ. ಈ ನಿಯೋಗದ ನೇತೃತ್ವವನ್ನು ರಾಜ್ಯದ ಮಾನ್ಯ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ವಹಿಸಿದ್ದರು.

ಪತ್ತಿನ ಸಹಕಾರಿ ಸಂಸ್ಥೆಗಳಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ಬರುತ್ತಿರುವ ನೋಟೀಸ್‌ಗಳ ಬಗ್ಗೆ ವಿವರಗಳನ್ನು ಅವರ ಗಮನಕ್ಕೆ ತರಲಾಗಿದೆ. ಸದ್ಯದಲ್ಲಿಯೇ ಇದಕ್ಕೆ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ. ಅದರಂತೆ ಮುಂಬರುವ ದಿನಗಳಲ್ಲಿ ನೇರ ತೆರಿಗೆ ಸಂಹಿತೆಯನ್ನು ಸಹಕಾರಿ ಸಂಸ್ಥೆಗಳನ್ನು ಹೊರತು ಪಡಿಸಿ ಅಥವಾ ಸಹಕಾರಿ ಸಂಸ್ಥೆಗಳಿಗೆ ರಿಯಾಯಿತಿಯಲ್ಲಿ ತೆರಿಗೆ ವಿಧಿಸುವ ಬಗ್ಗೆ ವಿನಂತಿಸಲಾಗಿದೆ. ಈ ಬಗ್ಗೆಯೂ ಪರಿಶೀಲಿಸಿ ಕ್ರಮವಿಡುವುದಾಗಿ ಭರವಸೆ ನೀಡಿದ್ದಾರೆ.

ರಾಜ್ಯದ ಸಹಕಾರಿಗಳ ತೊಂದರೆಗಳ ಬಗ್ಗೆ ಕಾಳಜಿ ಹೊಂದಿರುವ ಆಸಕ್ತಿಯಿಂದ ಕೇಂದ್ರ ಹಣಕಾಸು ಸಚಿವರಲ್ಲಿ ನಿಯೋಗದ ನೇತೃತ್ವ ವಹಿಸಿದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೇಂದ್ರ ಸಿಬಿಡಿಟಿ ಮಾನ್ಯ ಅಧ್ಯಕ್ಷರನ್ನು ಭೇಟಿ ಮಾಡುವ ನಿಯೋಗದ ನೇತೃತ್ವವನ್ನು ರಾಜ್ಯದ ಹಿರಿಯ ರಾಜಕಾರಣಿ ಮಾನ್ಯ ರಾಜ್ಯ ಸಭಾ ಸದಸ್ಯರಾದ



ಸಾಮಾನ್ಯ ಸಭೆಯಲ್ಲಿ ಉಪಸ್ಥಿತ ಪ್ರತಿನಿಧಿಗಳು

## ಚರ್ಚಾಗೋಷ್ಠಿ

ಸಾಮಾನ್ಯ ಸಭೆಯ ನಂತರದಲ್ಲಿ "ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧಿಸುವಿಕೆ ಮತ್ತು ಠೇವಣಿದಾರರ ಹಿತರಕ್ಷಣಾ ಮಸೂದೆ – 2015 ಮತ್ತು ಸಹಕಾರ ಸಂಸ್ಥೆಗಳು" ಎಂಬ ವಿಷಯದ ಬಗ್ಗೆ ಶ್ರೀ ಸತೀಶ ಮರಾಠೆ, ಇಂಡಿಯನ್ ಬ್ಯಾಂಕ್ ಅಸೋಸಿಯೇಷನಿನ ಮಾಜಿ ಕಾರ್ಯದರ್ಶಿ, ಇವರಿಂದ ಉಪನ್ಯಾಸ ಹಾಗೂ ಚರ್ಚಾಗೋಷ್ಠಿಯನ್ನು ಏರ್ಪಡಿಸಲಾಗಿತ್ತು.



ಶ್ರೀ ಬಸವರಾಜ ಪಾಟೀಲ್ ಸೇಡಂರವರು ವಹಿಸಿದ್ದರು.

**ಎನ್.ಸಿ.ಯು.ಐ., ಎನ್.ಸಿ.ಡಿ.ಸಿ. ಹಾಗೂ ನಬಾರ್ಡ್ ಸಂಸ್ಥೆಗಳಿಗೆ ಭೇಟಿ. ದೇಶದ ಮುಖ್ಯ ವಾಹಿನಿಯಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆಗೆ ಪ್ರಯತ್ನ :** ರಾಷ್ಟ್ರೀಯ ಸಹಕಾರಿ ಯೂನಿಯನ್ ನವದೆಹಲಿ (NCUI) ಹಾಗೂ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಗಳಿಗೆ ಭೇಟಿ ನೀಡಲಾಗಿದೆ. ರಾಷ್ಟ್ರಮಟ್ಟದಲ್ಲಿ ಲಿಬರಲ್ ಕಾಯ್ದೆಗಳು ಜಾರಿಯಲ್ಲಿರುವ 9 ರಾಜ್ಯಗಳಲ್ಲಿ ಈ ರೀತಿಯ ಸ್ವಾಯತ್ತ ಸಹಕಾರ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಮನವರಿಕೆ ಮಾಡಲಾಗಿದೆ. ದೇಶದ ಎಲ್ಲಾ ರಾಜ್ಯಗಳಲ್ಲೂ ಸ್ವಾಯತ್ತ ಸಹಕಾರಿ ಕಾಯ್ದೆಗಳು ಜಾರಿಗೆ ಬರುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸುವ ಕ್ರಮವಿಡುವಂತೆ ವಿನಂತಿಸಲಾಗಿದೆ. ಕರ್ನಾಟಕದ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಸ್ವಾಯತ್ತ ಸಹಕಾರಿ ಸಂಸ್ಥೆಗಳಿಗೆ ರಾಷ್ಟ್ರೀಯ ಸಹಕಾರಿ ಯೂನಿಯನ್ ಆಡಳಿತ ಮಂಡಳಿಯಲ್ಲಿ ಸ್ಥಾನವನ್ನು ನೀಡುವಂತೆ ವಿನಂತಿಸಲಾಗಿದೆ.

ಅದೇ ರೀತಿ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (NCDC) ಕಛೇರಿಗೆ ಭೇಟಿ ನೀಡಿ, ಅದರ ಕಾರ್ಯಾಚರಣೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಿಗಬಹುದಾದ ಯೋಜನೆಗಳು, ಅವುಗಳ ಅನುಷ್ಠಾನದ ವಿಧಾನ ಇತ್ಯಾದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಕೆಲವು ಯೋಜನೆಗಳನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (NCDC) ಸಂಸ್ಥೆಯಿಂದ ಪಡೆದುಕೊಳ್ಳಬಹುದಾಗಿದೆ ಮತ್ತು ನಬಾರ್ಡ್ NABARD ಸಂಸ್ಥೆಗೂ ಭೇಟಿ ನೀಡಿ, ಮಾತುಕತೆ ನಡೆಸಲಾಗಿದೆ. ಯೋಜನೆಗಳನ್ನು ಕೊಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿಗಳು ನಬಾರ್ಡ್ ಹಾಗೂ ಎನ್‌ಸಿಡಿಸಿ ಸಂಸ್ಥೆಯಿಂದ ಅನೇಕ ಯೋಜನೆಗಳನ್ನು ಬಳಸಿಕೊಳ್ಳಬಹುದಾಗಿದೆ. ಈಗಾಗಲೇ ಕೆಲವು ಸಹಕಾರಿಗಳು ಕೆಲವು ಯೋಜನೆಗಳ ಪ್ರಯೋಜನ ಪಡೆಯುತ್ತಿರುವುದು ಸಂತೋಷದ ವಿಷಯ.

**ಸೌಹಾರ್ದ ಸಹಕಾರಿಗಳಿಗೆ ಪ್ರತ್ಯೇಕ ನ್ಯಾಯಾಲಯ ಮಂಜೂರಾತಿ :** ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿನ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದಕ್ಕಾಗಿ ಸಂಯುಕ್ತ ಸಹಕಾರಿಯು 2 ಪ್ರತ್ಯೇಕ ನ್ಯಾಯಾಲಯಗಳನ್ನು ಮಂಜೂರು ಮಾಡಿಕೊಡುವಂತೆ ವಿನಂತಿಸಲಾಗಿತ್ತು. ಮಾನ್ಯ ಸಹಕಾರ ಸಚಿವರು ಒಂದು ನ್ಯಾಯಾಲಯವನ್ನು ಮಂಜೂರು ಮಾಡಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಮಾನ್ಯ ಸಹಕಾರ ಸಚಿವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಂದ ಬರಬೇಕಾಗಿರುವ ಕಟ ಬಾಕಿ ಸಾಲ ವಸೂಲಾತಿಗಾಗಿ ಈ ನ್ಯಾಯಾಲಯವನ್ನು ಉಪಯೋಗಿಸಿ, ಇದರ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಕೋರುತ್ತೇನೆ.

**ಸ್ವಂತ ಕಟ್ಟಡ/ನಿವೇಶನ :** ಸಂಯುಕ್ತ ಸಹಕಾರಿಯು ಬೆಂಗಳೂರಿನಲ್ಲಿ ತನ್ನ ಸ್ವಂತ ಕಟ್ಟಡವನ್ನು ಹೊಂದುವುದಕ್ಕೆ ಪ್ರಯತ್ನ ನಡೆದಿದೆ. ಸದ್ಯದಲ್ಲಿ ನಿಮ್ಮೆಲ್ಲರ ಸಹಕಾರದಿಂದ ಅದು ನೆರವೇರುವ ಸಾಧ್ಯತೆಯು ಇದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮಾತೃ ಸಂಸ್ಥೆಯಾಗಿರುವ ಸಂಯುಕ್ತ ಸಹಕಾರಿ ತನ್ನದೇ ಆದ ಕಟ್ಟಡವನ್ನು ಹೊಂದಿರುವುದರಿಂದ ಮುಂಬರುವ ದಿನಗಳಲ್ಲಿ ತನ್ನದೇ ಆದ ಆಡಳಿತ ಕಛೇರಿ, ತರಬೇತಿ ವ್ಯವಸ್ಥೆಗಳು, ನಿರ್ದೇಶಕರು ಹಾಗೂ ರಾಜ್ಯದ ಮೂಲೆ ಮೂಲೆಗಳಿಂದ ಬೆಂಗಳೂರಿಗೆ ಕಛೇರಿ ಕೆಲಸಕ್ಕೆ ಬಂದು ಹೋಗುವ ಸದಸ್ಯ ಸಹಕಾರಿಗಳಿಗೆ ವಸತಿ ವ್ಯವಸ್ಥೆ ಇತ್ಯಾದಿಗಳಿಗೆ ಅನುಕೂಲವಾಗುತ್ತದೆ. ಈ ಕಟ್ಟಡದ ವಿಸ್ತೀರ್ಣ 79 X 77 (7020) ಚದರ ಅಡಿ ಇದ್ದು, ಇದನ್ನು ರೂ. 10.95 ಕೋಟಿಗಳಿಗೆ ಖರೀದಿಸಲಾಗಿದೆ ಎಂದು ತಿಳಿಸಿದರು.

ಕೊನೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ನೇತಾರನಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷನಾಗಿ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಸಂಪೂರ್ಣ ಸಹಕಾರದಿಂದ ನನ್ನ ಕರ್ತವ್ಯವನ್ನು ನಿರ್ವಹಿಸಿದ ನೆಮ್ಮದಿ ನನಗಿದೆ ಎಂದು ತಿಳಿಸಿದರು. ಈ ಕಾರ್ಯದಲ್ಲಿ ನೆರವು ನೀಡಿರುವ ಕರ್ನಾಟಕ ರಾಜ್ಯದ ಸಹಕಾರ ಸಚಿವರಾದ ಶ್ರೀ ಮಹದೇವ ಪ್ರಸಾದರವರಿಗೆ, ಸಹಕಾರಿಗಳ ನಿಬಂಧಕರಾದ ಶ್ರೀ ಎಮ್.ಕೆ.ಅಯ್ಯಪ್ಪ ರವರಿಗೆ, ಮಾಜಿ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಮಹೇಂದ್ರ ಜೈನರವರಿಗೆ, ಹಿರಿಯ ಅಧಿಕಾರಿಗಳಿಗೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಸದಸ್ಯ ಸೌಹಾರ್ದ ಸಹಕಾರಿ ಸಂಸ್ಥೆಗಳು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಸೇರಿದಂತೆ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಅಧ್ಯಕ್ಷರ ಭಾಷಣದ ನಂತರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ್‌ವರು ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ಒಂದೊಂದಾಗಿ ವಿಷಯಗಳನ್ನು ಪ್ರಸ್ತಾಪಿಸಿದರು ಹಾಗೂ ಸದಸ್ಯರ ಪ್ರಶ್ನೆಗಳಿಗೆ ಅಧ್ಯಕ್ಷರ ಅನುಮತಿಯ ಮೇರೆಗೆ ಉತ್ತರಗಳನ್ನು ನೀಡಿದರು. ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಹಾಗೂ ಅನೇಕ ಪ್ರಶ್ನೋತ್ತರಗಳ ನಂತರ ಎಲ್ಲ ವಿಷಯಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಉತ್ತಮ ಕಾರ್ಯ ನಿರ್ವಹಿಸಿದೆ. ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಸದಸ್ಯರಿಂದ ಶ್ಲಾಘನೆ**

ಸಂಯುಕ್ತ ಸಹಕಾರಿಯ ಪ್ರಸಕ್ತ ಆಡಳಿತ ಮಂಡಲಿಯವರು ತಮ್ಮ ಅಧಿಕಾರಾವಧಿಯಲ್ಲಿ ಉತ್ತಮ ಕಾರ್ಯನಿರ್ವಹಿಸಿದ್ದಾರೆ ಎಂದು ಸಂಯುಕ್ತ ಸಹಕಾರಿ ಮಾಜಿ ಉಪಾಧ್ಯಕ್ಷರಾದ ಶ್ರೀ ಯು.ಹೆಚ್.ರಾಮಪ್ಪ, ಅಧ್ಯಕ್ಷರು ಕೃಷಿಕ್ ಸೌಹಾರ್ದ ಸಹಕಾರಿ ನಿ., ಸಾಗರ ಹಾಗೂ ಶ್ರೀ ಪ್ರಸನ್ನಕುಮಾರ್, ಅಧ್ಯಕ್ಷರು, ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇವರು ಸಾಮಾನ್ಯ ಸಭೆಯ ಪರವಾಗಿ ಆಡಳಿತ ಮಂಡಲಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಿದರು.

ಸಭೆಯ ಕೊನೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ವಂದನೆ ಸಲ್ಲಿಸಿದರು.

## ಶ್ರೀ ಎಸ್.ಆರ್.ಪಾಟೀಲ್, ಶ್ರೀ ಬಸನಗೌಡ ಪಾಟೀಲ್ ಯತ್ನಾಳ, ಶ್ರೀ ಅರುಣ ಶಹಾಪುರ, ಶ್ರೀ ಎಸ್.ಆರ್.ಸತೀಶ್ ಚಂದ್ರ ಹಾಗೂ ಶ್ರೀ ಶಾಂತಾರಾಮರವರಿಗೆ ಸನ್ಮಾನ











ವಿಧಾನ ಪರಿಷತ್‌ಗೆ ಮರು ಆಯ್ಕೆಯಾದ ಶ್ರೀ ಎಸ್.ಆರ್.ಪಾಟೀಲ್, ಶ್ರೀ ಅರುಣ ಶಹಾಪುರ ಹಾಗೂ ನೂತನವಾಗಿ ಆಯ್ಕೆಯಾಗಿರುವ ಶ್ರೀ ಬಸನಗೌಡ ಪಾಟೀಲ್ ಯತ್ನಾಳ ಮತ್ತು ಕ್ಯಾಂಪ್ಕೋ ಸಹಕಾರಿ ಸಂಸ್ಥೆಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಎಸ್.ಆರ್.ಸತೀಶ್‌ಚಂದ್ರ ಮತ್ತು ಸಹಕಾರ ರತ್ನ ಪುರಸ್ಕೃತರಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದ ಶ್ರೀ ಶಾಂತಾರಾಮರವರಿಗೆ ಸನ್ಮಾನ

## ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆ ಎಲ್ಲಾ ಸಹಕಾರಿ ಸಂಸ್ಥೆಗಳಿಗೆ ಮಾದರಿ - ಶ್ರೀ ಎಸ್.ಆರ್.ಪಾಟೀಲ್

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಪೂರ್ವದಲ್ಲಿ ನಡೆದ ಸನ್ಮಾನ ಸಭೆಯಲ್ಲಿ ಭಾಗವಹಿಸಿ, ಸನ್ಮಾನ ಸ್ವೀಕರಿಸಿ, ಮಾತನಾಡಿದ ಮಾಜಿ ಮಂತ್ರಿಗಳು, ವಿಧಾನ ಪರಿಷತ್ತಿಗೆ ಮರು ಆಯ್ಕೆಯಾಗಿರುವ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಸಹಕಾರಿ ಸಂಸ್ಥೆಗಳ ಸಾಮಾನ್ಯ ಸಭೆಗೆ ಕೋರಂ ಆಗುವುದೇ ಕಷ್ಟ. ಕೋರಂ ಆಗಿಸುವುದಕ್ಕಾಗಿ ಹರಸಾಹಸ ಮಾಡಬೇಕಾಗುತ್ತದೆ. ಆದರೆ, ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆ ಎಲ್ಲದಕ್ಕೂ ಒಂದು ಮಾದರಿಯಂತಿದೆ. ಕೋರಂಗಾಗಿ ಕಾಯುವ ಅಗತ್ಯವೇ ಎಲ್ಲ. ನಿಗದಿತ ಸಮಯಕ್ಕೆ ಮೊದಲೇ ಸಾಕಷ್ಟು ಸಂಖ್ಯೆಯಲ್ಲಿ ಸಹಕಾರಿಗಳು ಭಾಗವಹಿಸುವುದು ಸಹಕಾರಿಗಳ ಕ್ರಿಯಾಶೀಲತೆಗೆ ಸಕ್ರಿಯ ಭಾಗವಹಿಸುವಿಕೆ ಸಾಕ್ಷಿ ಎಂದು ತಿಳಿಸಿದರು.



ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ
ಲೋಪದೋಷಗಳ ಚರ್ಚೆ ಹಾಗೂ ಕೃತಜ್ಞತೆ ಸಭೆ

# ಚಿನ್ನಾಭರಣ ಸಾಲ ನೀಡುವ ವಿಧಿವಿಧಾನಗಳು ಮತ್ತು ಪ್ರಾಯೋಗಿಕ ಕುರಿತು ತರಬೇತಿ



**ಬೆಂಗಳೂರು** : ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಚಿನ್ನಾಭರಣ ಸಾಲದ ವ್ಯವಹಾರಗಳನ್ನು ನಿರ್ವಹಿಸುತ್ತಿರುವ ಸಿಬ್ಬಂದಿಯವರಿಗಾಗಿ ದಿನಾಂಕ 31.08.2016ರಂದು ನಗರದ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಚಿನ್ನಾಭರಣ ಸಾಲ ನೀಡುವ ವಿಧಿವಿಧಾನಗಳು ಮತ್ತು ಪ್ರಾಯೋಗಿಕವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ಸಹಕಾರಿಗಳು ಜನಸಾಮಾನ್ಯರ ಜೊತೆ ಚಿನ್ನಾಭರಣ ಸಾಲವನ್ನು ನೀಡುವಾಗ ಗ್ರಾಹಕರ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಜಾಗೃತವಾಗಿ ವ್ಯವಹಾರ ಮಾಡಬೇಕು. ಉತ್ತಮ ಬಂಗಾರ ಸಾಲ ಒಂದು ಅತ್ಯುತ್ತಮ ವ್ಯವಸಾಯವಾಗಿ ಬೆಳೆಯುತ್ತಿದೆ, ಹಾಗೇ ಉತ್ತಮ ಬಂಗಾರ ಸಾಲ ಅಧಿಕೃತ ಆಸ್ತಿ ಆಗಿರುತ್ತದೆ. ಆದ್ದರಿಂದ, ಚಿನ್ನಾಭರಣ ಸಾಲ ನೀಡುವುದರಿಂದ ಸಹಕಾರ ಸಂಸ್ಥೆ ಹೆಚ್ಚು ಆದಾಯ ಗಳಿಸಬಹುದು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಸ್ವಾಗತ ಹಾಗೂ ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ನೆರವೇರಿಸಿದರು. "ಸಾಲ ಮಂಜೂರಾತಿ ಕ್ರಮಗಳು ಹಾಗೂ ಅಡವಿಟ್ಟ ಚಿನ್ನವನ್ನು ಭದ್ರವಾಗಿರಿಸುವ ಕ್ರಮಗಳ" ಬಗ್ಗೆ ಬ್ಯಾಂಕಿಂಗ್ ತಜ್ಞರಾದ ಶ್ರೀ ಬಿ.ಎಸ್.ಚಂದ್ರಶೇಖರ್‌ರವರು ಬಗ್ಗೆ ಉಪನ್ಯಾಸ ನೀಡಿದರು. ನಂತರ ಸಹಕಾರಿ ಸಿಬ್ಬಂದಿಗಳು ಚಿನ್ನಾಭರಣ ಸಾಲ ನೀಡುವಾಗ ಅನುಸರಿಸಬಹುದಾದ ಕ್ರಮಗಳಲ್ಲಿ ಚಿನ್ನದ ಪರೀಕ್ಷೆ ಬಗ್ಗೆ ಚಿನ್ನಾಭರಣ ಪರೀಕ್ಷಕರಾದ ಶ್ರೀಮತಿ ಕೆ.ಪಿ ಶಶಿಕಲಾ, ಶ್ರೀ ಶ್ರೀನಾಥ ಶೆಟ್ಟಿ ಮತ್ತು ಶ್ರೀ ಸಿ ಆರ್ ಜಯಪ್ರಕಾಶರವರು ಶಿಬಿರಾರ್ಥಿಗಳಿಗೆ ಮೂರು ತಂಡಗಳನ್ನು ಮಾಡಿ, ಚಿನ್ನದ ಪರೀಕ್ಷೆಯ ಪ್ರಾಯೋಗಿಕವನ್ನು ನೀಡಿದರು. ತರಬೇತಿಯಲ್ಲಿ ರಾಜ್ಯದ 14 ಜಿಲ್ಲೆಗಳ 29 ಸೌಹಾರ್ದ ಸಹಕಾರಿಗಳ 46 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದರು.



ಚಿನ್ನಾಭರಣ ಪರೀಕ್ಷೆಯ ಪ್ರಾಯೋಗಿಕ

# ದಾವಾ ದಾಖಲಾತಿ ವಿಧಾನ ಮತ್ತು ಕ್ರಮಗಳು ಕುರಿತು ತರಬೇತಿ

**ಮೈಸೂರು** : ಮೈಸೂರು, ಮಂಡ್ಯ, ಚಾಮರಾಜನಗರ,ಕೊಡಗು,ಹಾಸನಹಾಗೂಚಿಕ್ಕಮಗಳೂರು ಜಿಲ್ಲೆಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ದಾವಾ ದಾಖಲಾತಿ ವಿಧಾನ ಮತ್ತು ಕ್ರಮಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ : 20.08.2016ರಂದು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.



ಕಾರ್ಯಕ್ರಮವನ್ನು ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಡಾ. ಜಿ.ಉಮೇಶ್ ರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಡಾ. ಜಿ.ಉಮೇಶ್, ಕರ್ನಾಟಕ ಸಹಕಾರಿ ನಿರ್ವಹಣಾ ಸಂಸ್ಥೆಯ ಪ್ರಾಂಶುಪಾಲರಾದ ಡಾ॥ ಎಲ್.ಸ್ವಾಮಿಗೌಡ, ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಬೃಹದಾಂಬ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಂ. ರವಿ ಇವರುಗಳು ಉಪಸ್ಥಿತರಿದ್ದರು. ನಂತರ ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕ್‌ನ ನಿವೃತ್ತ ಸಿ.ಜಿ.ಎಂ. ಆದ ಶ್ರೀ ಮಹಾಬಲಗಿರಿರವರು ಸೌಹಾರ್ದ ಸಹಕಾರಿಗಳಲ್ಲಿ "ದಾವಾ ದಾಖಲಾತಿ ವಿಧಾನ ಮತ್ತು ಕ್ರಮಗಳು" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಮೈಸೂರು ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಂದ 51 ಸೌಹಾರ್ದ ಸಹಕಾರಿಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಹಕಾರ ಮತ್ತು ಸಕ್ಕರೆ ಸಚಿವರ ಭೇಟಿ

**ಕಲಬುರಗಿ :** ದಿನಾಂಕ 19.08.2016ರಂದು ಕರ್ನಾಟಕ ರಾಜ್ಯದ ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರಾದ ಶ್ರೀ ಹೆಚ್.ಎಸ್. ಮಹಾದೇವಪ್ರಸಾದರವರು ಕಲಬುರಗಿಯ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಸದಸ್ಯತ್ವ ನೀಡುವ ಕುರಿತು ಮಾನ್ಯ ಸಚಿವರಿಗೆ ಮನವಿ ಪತ್ರವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಬಿ.ಆರ್.ಪಾಟೀಲ, ಮಾನ್ಯ ಶಾಸಕರು, ಆಳಂದ, ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಶ್ರೀ ಸಂಜೀವ ಎಸ್. ಮಹಾಜನ, ಶ್ರೀ ಸಿದ್ರಾಮಪ್ಪಾ ಎಸ್. ಪಾಟೀಲ, ಶ್ರೀ ಚಂದ್ರಶೇಖರ ರೆಡ್ಡಿ, ಶ್ರೀ ಮಾರ್ತಂಡ ಶಾಸ್ತ್ರಿ, ಶ್ರೀ ಬಸಲಿಂಗ ಸಗರ ಹಾಗೂ ಇತರರು ಹಾಜರಿದ್ದರು.





## ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಭೇಟಿ

**ಚಿಕ್ಕೋಡಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಗೆ ದಿನಾಂಕ 06.08.2016ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಆಡಳಿತ ಮಂಡಲಿಯ ನಿರ್ದೇಶಕರಾದ ಶ್ರೀ ಜಯಾನಂದ ಜಾಧವ ಹಾಗೂ ಶ್ರೀ ಶ್ರೀಕಾಂತ ಹತನೂರೆ ಇವರು ಭೇಟಿ ನೀಡಿದ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಉಡುಪಿ :** ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ದಾವಾ ದಾಖಲಾತಿ ವಿಧಾನ ಮತ್ತು ಕ್ರಮಗಳು" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 17.08.2016ರಂದು ಶ್ರೀ ವೀರಭದ್ರ ಕಲಾ ಭವನ, ಕಿನ್ನಿ ಮುಲ್ಕಿ, ಉಡುಪಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್, ಸಹಕಾರಿಗಳ ಉಪನಿಬಂಧಕರಾದ ಶ್ರೀ ಬಿ.ಪ್ರವೀಣ್ ನಾಯಕ್, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ವಿಠ್ಠಲ್ ಶೇರೇಗಾರ್, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಹಾಬಲಗಿರಿ, ನಿವೃತ್ತ ಸಿ.ಜಿ.ಎಂ., ಡಿಸಿಸಿ ಬ್ಯಾಂಕ್, ಶಿವಮೊಗ್ಗ ಹಾಗೂ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಿಂದ 91 ಸೌಹಾರ್ದ ಸಹಕಾರಿಗಳಿಂದ 92 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ

**ಕಲಬುರಗಿ :** ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ 1959ರ ಕಾಯ್ದೆಯಲ್ಲಿ ನೋಂದಣಿಗೊಂಡ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ದಿನಾಂಕ 17.08.2016ರಂದು "ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ" ತರಬೇತಿಯನ್ನು ಹೆಚ್.ಕೆ.ಸಿ.ಸಿ. ಸಭಾಂಗಣ, ಕಲಬುರಗಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು, ತರಬೇತಿಯನ್ನು ಶ್ರೀ ಶಾಂತಿನಾಥ ಪಂಡಿತ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ವೈ.ಟಿ.ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ ಬೀದರ್, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ 17 ಪತ್ತಿನ ಸಹಕಾರಿ ಸಂಘಗಳಿಂದ 26 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.



## ವ್ಯವಹಾರಗಳಲ್ಲಿ ವೃತ್ತಿಪರತೆ ಹಾಗೂ ಸುಸ್ಥಿ ಸಾಲಗಳ ವಸೂಲಾತಿ ತರಬೇತಿ ಕಾರ್ಯಾಗಾರ

**ಬೆಳಗಾವಿ :** ದಿನಾಂಕ 09.08.2016ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ವ್ಯವಹಾರಗಳಲ್ಲಿ ವೃತ್ತಿಪರತೆ ಹಾಗೂ ಸುಸ್ಥಿ ಸಾಲಗಳ ವಸೂಲಾತಿ" ತರಬೇತಿ ಕಾರ್ಯಾಗಾರವನ್ನು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಾಗಾರವನ್ನು ಬೆಳಗಾವಿಯ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಹಾಗೂ ಜಿಲ್ಲೆಯ ಸಹಕಾರಿ ಧುರೀಣರಾದ ಶ್ರೀ ಸಿದ್ಧನಗೌಡ ಸಿ. ಪಾಟೀಲರವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಕಾಂತ ಹತನೂರೆ, ವಕೀಲರು ಹಾಗೂ ಬೆಳಗಾವಿ ಅರ್ಬನ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎಸ್.ಮುತಾಲಿಕ್‌ರವರು ಆಗಮಿಸಿದ್ದರು. ಕಾರ್ಯಾಗಾರದಲ್ಲಿ 143 ಸೌಹಾರ್ದ ಸಹಕಾರಿಗಳಿಂದ 152 ಪ್ರತಿನಿಧಿಗಳು ಭಾಗವಹಿಸಿದ್ದರು.





**ಬೆಳಗಾವಿ :** ದಿನಾಂಕ 10.08.2016ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ ಹಾಗೂ ಖಾನಾಪುರ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ವ್ಯವಹಾರಗಳಲ್ಲಿ ವೃತ್ತಿಪರತೆ ಹಾಗೂ ಸುಸ್ಥಿ ಸಾಲಗಳ ವಸೂಲಾತಿ" ತರಬೇತಿ ಕಾರ್ಯಾಗಾರವನ್ನು ಕನ್ನಡ ಸಾಹಿತ್ಯ ಭವನ, ಚನ್ನಮ್ಮ ಸರ್ಕಲ್, ಬೆಳಗಾವಿಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಬೆಳಗಾವಿ ಬಸವೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಅಂಗಡಿಯವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಯಾನಂದ ಜಾಧವರವರು ವಹಿಸಿದ್ದರು. ಕಾರ್ಯಾಗಾರದಲ್ಲಿ 103 ಸೌಹಾರ್ದ ಸಹಕಾರಿಗಳಿಂದ 118 ಅಭ್ಯರ್ಥಿಗಳು ಹಾಜರಿದ್ದರು.

**ಚಿಕ್ಕೋಡಿ :** ದಿನಾಂಕ 11.08.2016ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ ಹಾಗೂ ರಾಯಬಾಗ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ವ್ಯವಹಾರಗಳಲ್ಲಿ ವೃತ್ತಿಪರತೆ ಮತ್ತು ಸುಸ್ಥಿ ಸಾಲಗಳ ವಸೂಲಾತಿ" ತರಬೇತಿ ಕಾರ್ಯಾಗಾರವನ್ನು ಚಿಕ್ಕೋಡಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಾಗಾರವನ್ನು ಶ್ರೀ ಡಿ.ಟಿ.ಪಾಟೀಲ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರಿ ಬ್ಯಾಂಕುಗಳ ಮಹಾಮಂಡಳ ನಿ., ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಆರ್.ಯಾದವ್, ಡಿ.ಜೆ.ಗುಂಡೆರವರು ಆಗಮಿಸಿದ್ದರು. ಕಾರ್ಯಾಗಾರದಲ್ಲಿ 87 ಸೌಹಾರ್ದ ಸಹಕಾರಿಗಳಿಂದ 97 ಪ್ರತಿನಿಧಿಗಳು ಆಗಮಿಸಿದ್ದರು.



## ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಪಿಗ್ಮಿ ಸಂಗ್ರಾಹಕರು ಮತ್ತು ಪಿಗ್ಮಿ ಸಂಬಂಧಿತ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ಮಿತ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಪಿಗ್ಮಿ ಸಂಗ್ರಾಹಕರು ಮತ್ತು ಪಿಗ್ಮಿ ಸಂಬಂಧಿತ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರವು ದಿನಾಂಕ : 13.08.2016ರಂದು ಉಡುಪಿಯ ನೈವೇದ್ಯ ಹೋಟೇಲಿನ ಅನುಗ್ರಹ ಸಭಾಗಂಣದಲ್ಲಿ ನಡೆಯಿತು. ಕಾರ್ಯಾಗಾರವನ್ನು ಶ್ರೀ ಕುಯಿಲಾಡಿ ಸುರೇಶ್ ನಾಯಕ್, ಅಧ್ಯಕ್ಷರು, ಬಸ್ ಮಾಲೀಕರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ.ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಗೋಪಿಕೃಷ್ಣ ರಾವ್, ಮಾಜಿ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಶ್ರೀ ರಾಧಾಕೃಷ್ಣ, ಅಧ್ಯಕ್ಷರು, ಮಿತ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇವರುಗಳು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳಲ್ಲಿ ಸಾಮಾನ್ಯ ಸಭೆಗಳು

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 15ನೇ ವಾರ್ಷಿಕ ಮಹಾಸಭೆ

**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ ಸಹಕಾರಿಯ 15ನೇ ವಾರ್ಷಿಕ ಮಹಾಸಭೆಯು ದಿನಾಂಕ 28.08.2016ರಂದು ಪುತ್ತೂರಿನ ಬೈಪಾಸ್ ರಸ್ತೆಯ ಜೈನ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ಜರುಗಿತು. ವರದಿ ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು ರೂ.3.06 ಕೋಟಿ ಪಾಲು ಬಂಡವಾಳ ಹೊಂದಿದ್ದು, ರೂ.134.97 ಕೋಟಿ ಠೇವಣಿ ಸಂಗ್ರಹಿಸಿದ್ದು, ರೂ.108.88 ಕೋಟಿ ಸಾಲ ವಿತರಿಸಿದೆ. ರೂ.2.48 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15 ದರದಲ್ಲಿ ಡಿವಿಡೆಂಡ್ ನೀಡಲು ಸಭೆಯು ನಿರ್ಧರಿಸಿತು.

**ಅಭಿನಂದನಾ ಕಾರ್ಯಕ್ರಮ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಮಾಜಿ ನಿರ್ದೇಶಕರುಗಳಾದ ಶ್ರೀ ಅಜಿತ್ ರಾವ್ ಕೆ, ಶ್ರೀ ಎನ್ ರಮೇಶ್ ಪ್ರಭು, ಶ್ರೀ ಪ್ರಭಾಕರ್ ನಾಯಕ್, ಶ್ರೀ ಸೂರ್ಯನಾರಾಯಣ ನಾಯಕ್ ಇವರುಗಳನ್ನು ಸನ್ಮಾನಿಸಲಾಯಿತು.



## ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 11ನೇ ವಾರ್ಷಿಕ ಸಾಮಾನ್ಯ ಸಭೆ



**ಶಿವಮೊಗ್ಗ :** ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 11ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 21.08.2016ರಂದು ವಿಪ್ರ ಸಭಾಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್.ಎ.ಆರ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ.2746.26 ಕೋಟಿ ಇದ್ದು, ರೂ.26 ಕೋಟಿ ಠೇವಣಿ ಸಂಗ್ರಹಣೆಯಾಗಿದೆ. ರೂ.17 ಕೋಟಿ ವಿವಿಧ ಸಾಲ ಹಾಗೂ ಮುಂಗಡಗಳನ್ನು ನೀಡಲಾಗಿದೆ. ಪ್ರಪ್ರಥಮವಾಗಿ ಸಹಕಾರಿಯು 10–ಕೀ ವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಿದ್ದು, ಪ್ರತಿ ತಿಂಗಳು ರೂ.12000/–ಗಳ ಆದಾಯವಿದೆ. ಮಲೆನಾಡು ಮಳಿಗೆಯಲ್ಲಿ ಮಾರಾಟ ಒಟ್ಟು ರೂ.57.33 ಲಕ್ಷ ಹಾಗೂ ತೀರ್ಥಹಳ್ಳಿ ರೈತ ಮಿತ್ರ ಅರೇಕಾ ಮಾರ್ಕೆಟಿಂಗ್ ನಲ್ಲಿ ರೂ.14 ಕೋಟಿ ವ್ಯವಹಾರ ನಡೆಯುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ.8.20 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.8ರಷ್ಟು ಲಾಭಾಂಶವನ್ನು ವಿತರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

## ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ

**ಪೋತ್ನಾಳ :** ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿ ನಿ., ಪೋತ್ನಾಳ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 28.08.2016ರಂದು ಶ್ರೀಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮೂರ್ತೆಯ್ಯ ಶೆಟ್ಟಿ ಕೆ ಇವರ ಅಧ್ಯಕ್ಷತೆಯಲಿ ನಡೆಯಿತು. ಸಹಕಾರಿಯು 2015–16ನೇ ಸಾಲಿನಲ್ಲಿ ಒಟ್ಟು ರೂ. 3.36 ಕೋಟಿ ಠೇವಣಿ ಹೊಂದಿದ್ದು, ರೂ. 3.07 ಕೋಟಿ ವಿವಿಧ ರೀತಿಯ ಸಾಲಗಳನ್ನು ವಿತರಿಸಲಾಗಿದೆ. ರೂ. 8,29,969/–ಗಳ ನಿವ್ವಳ ಲಾಭ ಗಳಿಸಿದೆ. ಸಹಕಾರಿಯ ಶೇರುದಾರರಿಗೆ ಶೇ.12ರಷ್ಟು ಲಾಭಾಂಶವನ್ನು ಅಧ್ಯಕ್ಷರು ಘೋಷಣೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ 5 ಜನ ಸದಸ್ಯರಿಗೆ ಉತ್ತಮ ಸದಸ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಲಿ ನಿರ್ದೇಶಕರೆಲ್ಲರು ಹಾಜರಿದ್ದರು.





## ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆ

**ಮಂಗಳೂರು :** ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 21.08.2016ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಗಣೇಶ್ ಶೆಣೈ ಮತ್ತು ಎಲ್ಲಾ ನಿರ್ದೇಶಕರು ಉಪಸ್ಥಿತಿಯಲ್ಲಿ ಮಂಗಳೂರಿನಲ್ಲಿ ನಡೆಯಿತು.

## ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಪ್ರತಿಭಾ ಪುರಸ್ಕಾರ



**ಕೋಡಿ-ಕನ್ಯಾಣ :** ಶ್ರೀ ರಾಮಾಂಜನೇಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಡಿ-ಕನ್ಯಾಣ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ಸ.ಹಿ.ಪ್ರಾ.ಶಾಲೆ, ಕೋಡಿ ಕನ್ಯಾಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಭುಶಂಕರರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಹಕಾರಿಯು ಕಾರ್ಯಾರಂಭಿಸಿದ ಕೇವಲ ಎರಡು ವರ್ಷಗಳ ಅವಧಿಯಲ್ಲಿ ರೂ. 3 ಕೋಟಿಗೂ ಮಿಕ್ಕಿ ಠೇವಣಿ ಸಂಗ್ರಹಿಸಿ, ರೂ. 2.5 ಕೋಟಿಗೂ ಮಿಗಿಲಾದ ವಿವಿಧ ಬಗೆಯ ಸಾಲವನ್ನು ವಿತರಿಸಿ, ಕಳೆದ ಸಹಕಾರಿ ವರ್ಷಾಂತ್ಯಕ್ಕೆ ಶೇ.100ರ ವಸೂಲಿಯ ದಾಖಲೆ ನಿರ್ಮಿಸಿ, ರೂ. 2 ಲಕ್ಷಕ್ಕೂ ಮಿಕ್ಕಿದ ಲಾಭ ಗಳಿಸಿದೆ. ಸಹಕಾರಿಯು ಗಳಿಸಿದ ಲಾಭದಲ್ಲಿ ಸಾಮಾನ್ಯ ಸಭೆಯು 'ಎ' ವರ್ಗದ ಸದಸ್ಯರಿಗೆ ಶೇ.5ರ ಡಿವಿಡೆಂಟ್ ಘೋಷಿಸಿದೆ.

ಈ ಸಂದರ್ಭದಲ್ಲಿ ತಮ್ಮ ಊರಿನ ಕನ್ನಡ ಮಾಧ್ಯಮದಲ್ಲಿ ಅತೀ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ, ಗೌರವಿಸಲಾಯಿತು ಹಾಗೂ ಸಹಕಾರಿಯ ಪಿಗ್ಮಿ ಸಂಗ್ರಹಕರಿಗೆ ಯಂತ್ರಗಳನ್ನು ವಿತರಿಸಲಾಯಿತು.




## ತೀರ್ಥಹಳ್ಳಿಯ ಸರಸ್ವತಿ ಸೌಹಾರ್ದ ಸಹಕಾರಿಯ 7ನೇ ಸರ್ವಸದಸ್ಯರ ಸಭೆ

**ತೀರ್ಥಹಳ್ಳಿ :** ಸರಸ್ವತಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ 7ನೇ ಸರ್ವಸದಸ್ಯರ ಸಭೆಯು ತೀರ್ಥಹಳ್ಳಿಯ ಶ್ರೀ ರಾಮಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಿರಿಯ ಸಹಕಾರಿಗಳಾದ ಶ್ರೀ ಕೆ. ನರಸಿಂಹ ನಾಯಕ್, ಡಾ॥ ಟಿ. ನಾರಾಯಣಸ್ವಾಮಿ ಹಾಗೂ "ಅಡಿಕೆ ಟೀ" ಸಂಶೋಧಕರಾದ ಶ್ರೀ ನೆಂಪೆ ನಿವೇದನ್‌ರವರಿಗೆ ಸನ್ಮಾನಿಸಲಾಯಿತು. ಕಳೆದ ಸಾಲಿನಲ್ಲಿ ರೂ. 28 ಲಕ್ಷ ಲಾಭ ಗಳಿಸಿದ್ದು, ಶೇ.15ರಂತೆ ಲಾಭಾಂಶ ವಿತರಿಸಲು ಸಭೆಯು ಒಪ್ಪಿಗೆ ಸೂಚಿಸಿತು.

## ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ

**ಸಿಂಧನೂರು :** ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 27.08.2016ರಂದು ಶ್ರೀ ಲಕ್ಷ್ಮೀ ರೆಸಿಡೆನ್ಸಿ, ಸಿಂಧನೂರಿನಲ್ಲಿ ನೆರವೇರಿತು. ಸಹಕಾರಿಯು ರೂ. 40.03 ಲಕ್ಷ ಲಾಭ ಗಳಿಸಿದ್ದು, ಶೇ.18ರಷ್ಟು ಲಾಭಾಂಶವನ್ನು ಸದಸ್ಯರಿಗೆ ಹಂಚಲು ತೀರ್ಮಾನಿಸಲಾಯಿತು.



## ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 4ನೇ ವರ್ಷದ ಸಾಮಾನ್ಯ ಸಭೆ

**ಬೆಂಗಳೂರು :** ದಿ ಸನ್‌ಸ್ಟಾರ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ 4ನೇ ವರ್ಷದ ಸರ್ವಸದಸ್ಯರ ಸಾಮಾನ್ಯ ಸಭೆಯು ದಿನಾಂಕ 07.08.2016ರಂದು ಸಹಕಾರಿ ಕಛೇರಿಯ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು.






## ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿಯ 10ನೇ ಸಾಮಾನ್ಯ ಸಭೆ

**ಚಿತ್ರದುರ್ಗ :** ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯ 10ನೇ ಸರ್ವಸದಸ್ಯರ ಸಾಮಾನ್ಯ ಸಭೆಯು ದಿನಾಂಕ 14.08.2016ರಂದು ನಗರದ ವಾಸವಿ ಮಹಲ್‌ನಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ಲಾಭವು ಮೊದಲ ಬಾರಿಗೆ ರೂ.1 ಕೋಟಿ ದಾಟಿದ್ದು, ಶೇ.20ರಷ್ಟು ಡಿವಿಡೆಂಡ್ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## ಅಹನಾ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್‌ನ 3ನೇ ವಾರ್ಷಿಕ ಸಾಮಾನ್ಯ ಸಭೆ

**ಹೊಸಪೇಟೆ :** ಅಹನಾ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಹೊಸಪೇಟೆ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ಹೊಸಪೇಟೆಯ ಸ್ಟೇಷನ್ ರಸ್ತೆಯಲ್ಲಿರುವ ರೋಟರಿ ಕ್ಲಬ್ ಹಾಲ್‌ನಲ್ಲಿ ದಿನಾಂಕ 14.08.2016ರಂದು ನಡೆಯಿತು. ಸಹಕಾರಿಯು 2015-16ನೇ ಸಾಲಿನಲ್ಲಿ 293 ಶೇರುದಾರರನ್ನು ಹೊಂದಿದ್ದು, ರೂ.9,90,000/-ಗಳ ಶೇರು ಬಂಡವಾಳವನ್ನು ಸಂಗ್ರಹಿಸಿದೆ. ಪ್ರಸ್ತುತ ಹಲವಾರು ಠೇವಣಿ ಯೋಜನೆಗಳಿಂದ ರೂ.7.67 ಕೋಟಿಯಷ್ಟು ಠೇವಣಿಯನ್ನು ಸಂಗ್ರಹಿಸಿದ್ದು, ವಾರ್ಷಿಕವಾಗಿ ರೂ.8.14 ಕೋಟಿಗಳ ವ್ಯವಹಾರವನ್ನು ನಡೆಸಿದೆ.



ಸಹಕಾರಿಯ ಶೇರುದಾರರಿಗೆ ಶೇ.20ರಷ್ಟು ಲಾಭಾಂಶವನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## ನೀಲಾಂಬಿಕ ಸೌಹಾರ್ದ ಪತ್ತಿನ ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆ

**ಸಿಂಧನೂರು :** ನೀಲಾಂಬಿಕ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿಂಧನೂರು ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ವಲ್ಕಂದಿನ್ನಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಸಿಂಧನೂರು ನಗರಸಭೆಯ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಪಾಟೀಲ್, ಸಹಕಾರಿಯ ಲೆಕ್ಕಪರಿಶೋಧಕರಾದ ಶ್ರೀ ನಾಗನಗೌಡ ಕೆ ಆಗಮಿಸಿದ್ದರು. ಉಪಾಧ್ಯಕ್ಷರಾದ ಶ್ರೀ ದೇವೇಂದ್ರಗೌಡ ಹೋಸಳ್ಳಿ (ಇ.ಜೆ), ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.






## ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ

**ತುಮಕೂರು :** ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಕ್ಯಾತ್ಸಂದ್ರ ಸಹಕಾರಿಯ ಸಾಮಾನ್ಯ ಸಭೆಯು ಶ್ರೀ ಉದ್ದಾನೇಶ್ವರ ಸಮುದಾಯ ಭವನ ಸಿದ್ಧಗಂಗಾ ಮಠದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸದಸ್ಯರುಗಳಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

## ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 2ನೇ ಶಾಖೆ ಆರಂಭ ಸಮಾಜದ ದುರ್ಬಲ ವರ್ಗದ ಅಭಿವೃದ್ಧಿಗೆ ಸೌಹಾರ್ದಗಳ ಪಾತ್ರ ಹಿರಿದು - ಶ್ರೀ ಎಸ್.ಆರ್. ವಿಶ್ವನಾಥ್

**ಯಲಹಂಕ :** ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 2ನೇ ಶಾಖೆಯನ್ನು ಕಾಮಾಕ್ಷಮ್ಮ ಲೇಔಟಿನಲ್ಲಿ ಶ್ರೀ ಶ್ರೀ ಶ್ರೀ ದಿವ್ಯ ಜ್ಞಾನಾನಂದಗಿರಿ ಸ್ವಾಮೀಜಿಯವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಶಾಸಕರಾದ ಶ್ರೀ ಎಸ್.ಆರ್.ವಿಶ್ವನಾಥ್‌ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಿದ್ದರೂ ಜನಸಂಖ್ಯೆ ಪ್ರಮಾಣಕ್ಕೆ ಸಾಕಾಗುತ್ತಿಲ್ಲ. ಈ ನಿಟ್ಟಿನಲ್ಲಿ ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯು ಅಭಿವೃದ್ಧಿ ಹೊಂದದ ಬಡಾವಣೆ ಮತ್ತು ಗ್ರಾಮಗಳಲ್ಲೇ ತನ್ನ ಶಾಖೆಗಳನ್ನು ಆರಂಭಿಸುತ್ತಿರುವುದು ಶ್ಲಾಘನೀಯ ಎಂದರು. ಅತಿಥಿಗಳಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೇರವರು ಮಾತನಾಡಿ ಜನಸಾಮಾನ್ಯರ, ಕೂಲಿಕಾರರ, ನೇಕಾರರ ಜೀವನ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿ ಸಂಸ್ಥೆಗಳು ಸೌಹಾರ್ದ ಚಳುವಳಿಯ ಮೂಲಕ ದುಡಿಯುತ್ತಿವೆ. ಈ ಗುರಿಯನ್ನು ಸಾಧಿಸಲು ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯು ಕಾರ್ಯಪ್ರವೃತ್ತವಾಗಿರುವುದು ಮೆಚ್ಚತಕ್ಕ ವಿಷಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿಬಿಎಂಪಿಯ ಪಾಲಿಕೆ ಸದಸ್ಯರಾದ ಶ್ರೀಮತಿ ಚಂದ್ರಮ್ಮ ಕೆಂಪೇಗೌಡ, ಶ್ರೀಮತಿ ಪದ್ಮಾವತಿ ಅಮರನಾಥ್, ಸಹಕಾರಿಯ ಅಧ್ಯಕ್ಷರಾದ



ಶ್ರೀ ಬಿ.ಪುಟ್ಟಶಾಮಪ್ಪ, ಉಪಾಧ್ಯಕ್ಷರಾದ ಶ್ರೀ ವೀರೇಶ್, ಸಹಕಾರಿಯ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು ಶ್ರೀ ಬಿ.ಆರ್.ಬೈರೇಗೌಡ, ಶ್ರೀ ಆರ್.ರವಿಚಂದ್ರ, ಶ್ರೀ ಎ.ಶಿವಪ್ಪ, ಬಿಬಿಎಂಪಿಯ ಮುಖ್ಯ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ ವಾಸು, ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಜಿ.ಹೆಗಡೆ, ಮಾಜಿ ನಗರಸಭಾ ಅಧ್ಯಕ್ಷರಾದ ಶ್ರೀ ಕೆಂಪೇಗೌಡ, ಮಾಜಿ ಬಿಬಿಎಂಪಿ ಪಾಲಿಕೆ ಸದಸ್ಯರಾದ ಶ್ರೀ ವೈ.ಎನ್.ಅಶ್ವಥ್, ಸ್ಥಳೀಯ ಉದ್ಯಮಿಗಳಾದ ಶ್ರೀ ಜಿ.ಈಶ್ವರಪ್ಪ, ಶ್ರೀ ಎ.ಎಸ್. ರಾಮದಾಸ್, ಶ್ರೀ ಎ.ಎಸ್.ರಾಜ ಮತ್ತಿತರರು ಭಾಗವಹಿಸಿದ್ದರು.

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್‌ನ ಜಿಗಣಿ ಶಾಖೆಯ ಉದ್ಘಾಟನೆ

**ಜಿಗಣಿ :** ದಿನಾಂಕ 15.08.2016ರಂದು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿಮಿಟೆಡ್‌ನ ಜಿಗಣಿ ಶಾಖೆಯ ಉದ್ಘಾಟನಾ ಸಮಾರಂಭವನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಜಿಗಣಿ ಪುರಸಭೆಯ ಅಧ್ಯಕ್ಷರಾದ ಶ್ರೀಮತಿ ಮುನಿರತ್ನಮ್ಮ ಶಂಕರ, ಉಪಾಧ್ಯಕ್ಷರಾದ ಶ್ರೀಮತಿ ಕೃಷ್ಣಮ್ಮ ಮರಿಯಪ್ಪರವರು ಆಗಮಿಸಿದ್ದರು. ಈ ಸಭೆಗೆ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು, ಹೆಬ್ಬಗೋಡಿ ಮತ್ತು ಜಿಗಣಿ ಶಾಖೆಯ ಉಸ್ತುವಾರಿ ಸಮಿತಿಯ ಸದಸ್ಯರು, ವ್ಯವಸ್ಥಾಪಕರು, ಸಿಬ್ಬಂದಿಗಳು ಹಾಗೂ ಜಿಗಣಿ ಶಾಖೆಯ ನಾಗರೀಕ ಬಂಧುಗಳು ಉಪಸ್ಥಿತರಿದ್ದರು.



## ಇ–ಸ್ಟ್ಯಾಂಪಿಂಗ್ ಕೇಂದ್ರದ ಉದ್ಘಾಟನೆ

ಶ್ರೀ ಸಂಜೀವಿನಿ ಕ್ರೆಡಿಟ್ ಸೌಹಾರ್ದ ಸಹಕಾರಿಯು ಬೀಡಿಯಲ್ಲಿ ಪ್ರಾರಂಭಿಸಲಾದ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಡಾ. ಗಂಗಾಧರ ಜವಳಿಯವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಾರುತಿ ಲ ಮಡಿವಾಳಕರ ಮತ್ತು ಉಪಾಧ್ಯಕ್ಷರಾದ ಶ್ರೀ ಆನಂದ ಮ ಕಂಗಳೇಕರ ಹಾಗೂ ನಿರ್ದೇಶಕ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿಯ ನವೀಕೃತ ಕಟ್ಟಡದ ಉದ್ಘಾಟನೆ



**ಚಿತ್ರದುರ್ಗ :** ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯ ನವೀಕೃತ ಕಟ್ಟಡದ ಉದ್ಘಾಟನೆಯನ್ನು ಶ್ರೀ ಡಿ.ಹೆಚ್.ಶಂಕರಮೂರ್ತಿ, ಮಾನ್ಯ ಸಭಾಪತಿಗಳು, ವಿಧಾನ ಪರಿಷತ್, ಕರ್ನಾಟಕ ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜಶೆಟ್ಟರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಶಾಸಕರಾದ ಶ್ರೀ ಜಿ.ಎಚ್. ತಿಪ್ಪಾರೆಡ್ಡಿಯವರು ಮತ್ತು ವಿಶೇಷ ಆಹ್ವಾನಿತರಾಗಿ ಶ್ರೀ ಎಚ್.ಎನ್.ಮಂಜುನಾಥ ಗೊಪ್ಪೆ, ಶ್ರೀ ಆರ್.ಪಿ.ರವಿಶಂಕರ್, ಶ್ರೀ ಎಸ್.ಎನ್.ಕಾಶಿವಿಶ್ವನಾಥ ಶೆಟ್ಟಿ ಇವರುಗಳು ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಂ.ಕೆ. ರವೀಂದ್ರ ಮತ್ತು ಮಾಜಿ ಅಧ್ಯಕ್ಷರಾದ ಶ್ರೀ ಎಲ್.ಬ್ರಹ್ಮಾನಂದಗುಪ್ತಾರವರು ಹಾಗೂ ಆಡಳಿತ ಮಂಡಲಿ ನಿರ್ದೇಶಕರು ಉಪಸ್ಥಿತರಿದ್ದರು.

## ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್‌ನ ಶಾಖೆಯ ಉದ್ಘಾಟನೆ



**ಮೈಸೂರು :** ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಯ 42ನೇ ಶಾಖೆಯನ್ನು ಸಾಂಸ್ಕೃತಿಕ ನಗರವಾದ ಮೈಸೂರಿನಲ್ಲಿ ದಿನಾಂಕ 07.08.2016ರಂದು ಮೈಸೂರಿನ ಜಯಲಕ್ಷ್ಮಿಪುರಂನ ಸೈಂಟ್ ಜೋಸೆಫ್ ಚರ್ಚ್‌ನ ಧರ್ಮಗುರುಗಳಾದ ವಂದನೀಯ ಫಾ. ಕೆ. ಎ. ವಿಲಿಯಂರವರ ಆಶೀರ್ವಚನದಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದ ವಿಧಾನಸಭಾ ಸದಸ್ಯರಾದ ಶ್ರೀ ವಾಸುರವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡಿತು.



ಶ್ರೀಗುರು ಶ್ರೀಸಿದ್ಧಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ ಸಹಕಾರಿಯ ಉದ್ಘಾಟನೆ



ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯ ಶೇರು ಪ್ರಮಾಣ ಪತ್ರ ವಿತರಣಾ ಸಮಾರಂಭ

# ಉದಯ ಸೌಹಾರ್ದ ಪತ್ತಿನ ಸಹಕಾರಿಯ ಪ್ರಥಮ ಶಾಖೆಯ ಉದ್ಘಾಟನೆ



**ಬೆಂಗಳೂರು** : ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಹನುಮಂತನಗರ, ಬೆಂಗಳೂರು ಸಹಕಾರಿಯ ಪ್ರಥಮ ಶಾಖೆಯು ಬೆಂಗಳೂರಿನ ರಾಮಮೂರ್ತಿನಗರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಗುಂಡುರಾವ್‌ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಅಥಿಗಳಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ಮತ್ತು ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರು, ಸಿಬ್ಬಂದಿ ವರ್ಗ, ಸದಸ್ಯರು ಹಾಗೂ ರಾಮಮೂರ್ತಿನಗರದ ಸಾರ್ವಜನಿಕರು ಭಾಗವಹಿಸಿದ್ದರು.

ಹೊಸ ಆಶಯದೊಂದಿಗೆ ಸದಸ್ಯರ ಆಕಾಂಕ್ಷೆಗಳನ್ನು ಹೊತ್ತು ಜವಾಬ್ಧಾರಿಯೊಂದಿಗೆ ಕಾರ್ಯನಿರ್ವಹಿಸುವ ಪ್ರಮಾಣದೊಂದಿಗೆ ಶಾಖೆಯ ಉದ್ಘಾಟನಾ ಪ್ರಾರಂಭೋತ್ಸವವು ಯಶಸ್ವಿಯಾಗಿ ನೆರವೇರಿತು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ಗುರು ಬಸವಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಜಮಖಂಡಿ



ಶ್ರೀ ಜಿ.ಆರ್.ಅನಂತಪೂರ
ಅಧ್ಯಕ್ಷರು



ಶ್ರೀ ಎಮ್.ಎ.ತುಪ್ಪದ
ಉಪಾಧ್ಯಕ್ಷರು

### ಕಲಾಮ್ ಅಲ್ಪಸಂಖ್ಯಾತರ ಪತ್ತಿನ ಸೌಹಾರ್ದ ಸಹಕಾರಿ ನಿ., ಗದ್ದನಕೇರಿ



ಶ್ರೀ ಮಹ್ಮದರಫೀಕ ಡೋಂಗ್ರೀಸಾಬ ತಹಶೀಲ್ದಾರ, ಅಧ್ಯಕ್ಷರು



ಶ್ರೀ ಅಹ್ಮದರಸೂಲ ಹುಸೇನಸಾಬ ಕಿರಸೂರ
ಉಪಾಧ್ಯಕ್ಷರು

### ನವತುಂಗಭದ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ



ಶ್ರೀ ವೆಂಕಟೇಶ ಮುದಿಯಪ್ಪ ಗಡಗಿ, ಅಧ್ಯಕ್ಷರು



ಶ್ರೀ ಪ್ರಕಾಶರೆಡ್ಡಿ ವೆಂಕಟಗಿರಿಯಪ್ಪ ಕಾತರಕಿ
ಉಪಾಧ್ಯಕ್ಷರು

## ಆರ್‌ಬಿಐಯ 24ನೇ ಗವರ್ನರ್ ಆಗಿ ಊರ್ಜಿತ್ ಪಟೇಲ್ ಅಧಿಕಾರ ಸ್ವೀಕಾರ



ನವದೆಹಲಿ: ರಿಸರ್ವ್ ಬ್ಯಾಂಕಿನ 24ನೇ ಗವರ್ನರ್ ಆಗಿ ಉರ್ಜಿತ್ ಪಟೇಲ್ ಸೋಮವಾರ ಅಧಿಕಾರ ಸ್ವೀಕರಿಸಿದ್ದಾರೆ. ಉರ್ಜಿತ್ ಪಟೇಲ್ ಅವರು 2013ರಿಂದ ಇಲ್ಲಿಯವರೆಗೆ ಉಪ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದರು. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಕೂಡ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಮಾರುಕಟ್ಟೆ, ಬ್ಯಾಂಕಿಂಗ್ ವಲಯ ಸುಧಾರಣೆ, ಪಿಂಚಣಿ ನಿಧಿ ಸುಧಾರಣೆಗಳು ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಯ ವಿಕಾಸ ಮೊದಲಾದ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. 1998ರಿಂದ 2001ರವರೆಗೆ ಹಣಕಾಸು ಸಚಿವಾಲಯದಲ್ಲಿ ಸಲಹೆಗಾರರಾಗಿದ್ದರು.

ಊರ್ಜಿತ್ ಪಟೇಲ್ ಹಲವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉನ್ನತ ಮಟ್ಟದ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ. ಕೇಲ್ಕರ್ ಸಮಿತಿಯ ನೇರ ತೆರಿಗೆಗಳ ಕಾರ್ಯಪಡೆ, ನಾಗರಿಕ ಮತ್ತು ರಕ್ಷಣಾ ಸೇವೆ ಪಿಂಚಣಿ ವ್ಯವಸ್ಥೆಯ ಪರಾಮರ್ಶೆಗಿರುವ ಉನ್ನತ ಮಟ್ಟದ ತಜ್ಞರ ಸಮಿತಿ, ಪ್ರಧಾನ ಮಂತ್ರಿಗಳ ಮೂಲಭೂತ ಸೌಕರ್ಯಗಳ ಕಾರ್ಯಪಡೆ, ಟೆಲಿಕಾಂ ಮ್ಯಾಟರ್ಸ್ ನ ಸಚಿವರ ಗುಂಪು, ನಾಗರಿಕ ವಿಮಾನಯಾನ ಸುಧಾರಣೆಯ ಸಮಿತಿ, ಇಂಧನ ತಜ್ಞರ ಗುಂಪಿನ ಸಚಿವಾಲಯ ಮೊದಲಾದ ಇಲಾಖೆಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ಊರ್ಜಿತ್ ಪಟೇಲ್ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಅನೇಕ ಲೇಖನಗಳನ್ನು ಪತ್ರಿಕೆಗಳಿಗೆ ಬರೆದಿದ್ದಾರೆ.

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ವಿಭಾಗೀಯ ಕಛೇರಿಗಳು ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 70ನೇ ಸ್ವಾತ್ರಂತ್ರ್ಯ ದಿನದ ಆಚರಣೆ



**ಕಲಬುರಗಿ ವಿಭಾಗ :** ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರಿಂದ ಧ್ವಜಾರೋಹಣ.



**ಕೇಂದ್ರ ಕಛೇರಿ :** ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರಿಂದ ಧ್ವಜಾರೋಹಣ.




ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ರಘುಕುಮಾರ್‌ವರಿಂದ ಧ್ವಜಾರೋಹಣ.



**ಬೆಂಗಳೂರು ವಿಭಾಗ ಮತ್ತು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ :** ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರಿಂದ ಧ್ವಜಾರೋಹಣ.



ಶ್ರೀ ಮಹಾಗಣಪತಿ – ಮಹಾಸತಿ (ಎಮ್.ಜಿ. ಎಮ್) ಸೌಹಾರ್ದ ಪತ್ತಿನ ಸಹಕಾರಿ ನಿ., ಸರ್ಪನಕಟ್ಟೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಪ್ಪ ಮಂಜಪ್ಪ ನಾಯ್ಕರವರಿಂದ ಧ್ವಜಾರೋಹಣ.



ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಣ್ಣ ಕಡಾಡಿರವರಿಂದ ಧ್ವಜಾರೋಹಣ.



ಬೆಳಗಾವಿ ವಿಭಾಗ : ಶ್ರೀ ಬಿ.ಎಸ್. ಸುಲ್ತಾನಪೂರೆ ಅವರಿಂದ ಧ್ವಜಾರೋಹಣ



ಸೂರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಲಗೇರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ ಹಮ್ಮಣ್ಣ ನಾಯಕರವರಿಂದ ಧ್ವಜಾರೋಹಣ.



**ಮೈಸೂರು ವಿಭಾಗ :** ಶ್ರೀ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅರಮನೆ ಜಪದ ಕಟ್ಟೆ ಮಠ, ಮೈಸೂರು ಇವರಿಂದ ಧ್ವಜಾರೋಹಣ.



ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ನೀಲಕಂಠಯ್ಯ ಅವರಿಂದ ಧ್ವಜಾರೋಹಣ.



ಸುಯೋಗ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಮಹಾಲಿಂಗಪುರ

### "ದಿ ಲಕ್ಷ್ಮಣರಾವ ಇನಾಮದಾರ ಸಹಕಾರ ಸದನ" ಸಹಕಾರ ಭಾರತಿ, ಕರ್ನಾಟಕಕ್ಕೆ ಸ್ವಂತ ಕಛೇರಿ ಕಟ್ಟಡ ಉದ್ಘಾಟನೆ

# ಸಹಕಾರ ಕ್ಷೇತ್ರದ ಶುದ್ಧೀಕರಣ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆ ಸಹಕಾರ ಕ್ಷೇತ್ರಕ್ಕೆ ನವ ದೃಷ್ಟಿಕೋನ ಸಹಕಾರ ಭಾರತಿಯ ಆಶಯ - ಶ್ರೀ ಮಂಗೇಶ ಭೇಂಡೆ



**ಬೆಂಗಳೂರು :** ಸಹಕಾರ ಭಾರತಿ, ಕರ್ನಾಟಕ ಇದಕ್ಕೆ ಸ್ವಂತ ಕಛೇರಿ ಕಟ್ಟಡವನ್ನು ದಿನಾಂಕ 31.08.2016 ರಂದು ಆರ್ ಎಸ್ ಎಸ್ ನ ರಾಷ್ಟ್ರೀಯ ವ್ಯವಸ್ಥಾಪ್ರಮುಖರಾದ ಶ್ರೀ ಮಂಗೇಶ ಭೇಂಡೆಯವರು ದಿ ಲಕ್ಷ್ಮಣರಾವ ಇನಾಮದಾರ ಸಹಕಾರ ಸದನವನ್ನು ಉದ್ಘಾಟಿಸಿ, ಸಹಕಾರ ಭಾರತಿ ದೇಶದ ಸಹಕಾರ ಚಳುವಳಿಯ ಅಭಿವೃದ್ಧಿಯ ಪ್ರೇರಕ, ಸಂಪರ್ಕ ಹಾಗೂ ಮಾರ್ಗದರ್ಶಕ ಶಕ್ತಿಯಾಗಿ ಬೆಳೆಯುತ್ತಿದೆ. ಬಿನಾ ಸಂಸ್ಕಾರ ನಹಿ ಸಹಕಾರ ಬಿನಾ ಸಹಕಾರ ನಹಿ ಉದ್ಧಾರ ಎಂಬ ಘೋಷ ವಾಕ್ಯದೊಂದಿದೆ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕರಿಗೆ ಸಹಕಾರವೆಂಬ ಸಂಸ್ಕಾರವನ್ನು ನೀಡುತ್ತಿದೆ. ಇದು ಶಕ್ತಿಯುತವಾಗಿ ಬೆಳೆದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದಲ್ಲಿ ಸಹಕಾರ ಕ್ಷೇತ್ರದ ಶುದ್ಧೀಕರಣ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆ ಸಾಧ್ಯ ಎಂದು ತಿಳಿಸಿದರು.

**ಶ್ರೀ ರಮೇಶ ಜಿಗಜಿಣಗಿ, ಮಾನ್ಯ ಸಚಿವರು, ಕುಡಿಯುವ ನೀರು ಹಾಗೂ ನೈರ್ಮಲ್ಯ ಖಾತೆ, ಕೇಂದ್ರ ಸರಕಾರ :** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಶ್ರೀ ರಮೇಶ ಜಿಗಜಿಣಗಿ, ಮಾನ್ಯ ಸಚಿವರು, ಕೇಂದ್ರ ಸರಕಾರ ಇವರು ಸಹಕಾರ ಕ್ಷೇತ್ರದಿಂದ ಶ್ರೀ ಸಾಮಾನ್ಯರ ಸೇವೆಗೆ ಹೆಚ್ಚಿನ ಅವಕಾಶಗಳಿವೆ. ಎಲ್ಲಾ ವರ್ಗದ ಜನರಿಗೂ ಈ ಸೇವೆ ಸಿಗುವಂತಾಗಬೇಕು ಎಂದು ತಿಳಿಸಿ, ಸಹಕಾರ ಭಾರತಿ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದರು.

**ಶ್ರೀ ಜಗದೀಶ ಶೆಟ್ಟರ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯ ಮಂತ್ರಿಗಳು :** ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ್‌ರವರು ಮಾತನಾಡಿ, ಸಹಕಾರ ಕ್ಷೇತ್ರ ರಾಜಕೀಯ ಮುಖಂಡರನ್ನು ಸಿದ್ಧಪಡಿಸುವ ಕ್ಷೇತ್ರ. ಅನೇಕ ರಾಜಕೀಯ ಮುಖಂಡರು ಸಹಕಾರ ಕ್ಷೇತ್ರದಿಂದಲೇ ರಾಜಕೀಯಕ್ಕೆ ಬಂದಿದ್ದಾರೆ. ಉತ್ತಮ ಸಹಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಶ್ರೀ ಗೋವಿಂದ ಕಾರಜೋಳ, ಮಾನ್ಯ ಶಾಸಕರು ಹಾಗೂ ಮಾಜಿ ಸಚಿವರು :** ಮಾಜಿ ಮಂತ್ರಿ ಹಾಗೂ ಶಾಸಕ ಶ್ರೀ ಗೋವಿಂದ ಕಾರಜೋಳರವರು ಮಾತನಾಡಿ ಈ ಕ್ಷೇತ್ರಕ್ಕೆ 110 ವರ್ಷಗಳ ಇತಿಹಾಸವಿದೆ. ಆರ್ಥಿಕ ಕ್ಷೇತ್ರದಲ್ಲಿ ಸಾಕಷ್ಟು ಉತ್ತಮ ಕಾರ್ಯ ಈ ಕ್ಷೇತ್ರದಿಂದಾಗಿದೆ. ಆದರೂ ಈ ದೇಶದ ಒಟ್ಟು ಜನಸಂಖ್ಯೆಯಲ್ಲಿ ಕೇವಲ 25% ಜನರು ಮಾತ್ರ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನೂ ಹೆಚ್ಚು ಜನರು ಈ ಕ್ಷೇತ್ರದಡಿಗೆ ಬರಬೇಕಿದೆ. ಅಂತಹ ಕಾರ್ಯವನ್ನು ಸಹಕಾರ ಭಾರತಿ ನಿರ್ವಹಿಸಲಿ ಎಂದು ಶುಭ ಹಾರೈಸಿದರು.

**ಶ್ರೀ ಲಕ್ಷ್ಮಣ ಸವದಿ, ಮಾನ್ಯ ಶಾಸಕರು ಹಾಗೂ ಮಾಜಿ ಸಹಕಾರ ಸಚಿವರು :** ಮುಖ್ಯ ಅತಿಥಿಗಳಾಗಿ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದ ಶ್ರೀ ಲಕ್ಷ್ಮಣ ಸವದಿಯವರು ಇದು ಅತ್ಯಂತ ಪವಿತ್ರವಾದ ಜನಸಾಮಾನ್ಯರಿಗೆ ಸೇವೆ ನೀಡುವ ಆರ್ಥಿಕ ಅಭಿವೃದ್ಧಿ ಸಾಧಿಸುವ ಸಾಧನ ಹಾಗೂ ಮಾಧ್ಯಮ. ಈ ಕ್ಷೇತ್ರಕ್ಕೆ ತನ್ನದೇ ಆದ ಇತಿಹಾಸವಿದೆ. ಮೌಲ್ಯಗಳಿವೆ. ಸಾಧನೆಗಳಿವೆ. ವಿಶ್ವ ಮಾನ್ಯತೆಯನ್ನು ಪಡೆದಿದೆ. ಭಾರತದಲ್ಲಿ ಅತ್ಯಂತ ದೊಡ್ಡದಾಗಿ ಬೆಳೆದಿದೆ. ಈ ಕ್ಷೇತ್ರ ಉಳಿಯಬೇಕು, ಬೆಳೆಯಬೇಕು.

**ಶ್ರೀ ಸತೀಶ ಮರಾಠೆ, ಸಲಹೆಗಾರ, ಸಹಕಾರ ಭಾರತಿ :** ಸಹಕಾರ ಭಾರತಿಯ ಮಾಜಿ ಅಧ್ಯಕ್ಷರು, ಹಾಲಿ ಸಲಹೆಗಾರರಾದ, ಸಹಕಾರಿ ಚಿಂತಕರಾದ ಶ್ರೀ ಸತೀಶ ಮರಾಠೆಯವರು ಮಾತನಾಡಿ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಪರವಾಗಿ ಅನೇಕ ರಾಷ್ಟ್ರಮಟ್ಟದ ಹಾಗೂ ರಾಜ್ಯ ಮಟ್ಟದ ಮಹಾಮಂಡಳಿಗಳಿವೆ, ಅವುಗಳ ಕಾರ್ಯ ಅವುಗಳ ಧ್ಯೇಯೋದ್ದೇಶಗಳಿಗೆ ಮಾತ್ರ ಸೀಮಿತವಾಗಿದೆ. ಹಾಗಾಗಿ ಒಟ್ಟಾರೆ ಸಹಕಾರಿ ಕ್ಷೇತ್ರದ ಆಗುಹೋಗುಗಳ ಬಗ್ಗೆ ಚಿಂತನೆಗೆ, ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಮತ್ತು ಸರಕಾರಗಳಿಗೆ ಆಗಾಗ್ಗೆ ಸಹಕಾರ ಕ್ಷೇತ್ರದ ವಿದ್ಯಮಾನಗಳನ್ನು ಗಮನಕ್ಕೆ ತಂದು ಅಭಿವೃದ್ಧಿಯತ್ತ ಗಮನ ಹರಿಸುವಂತೆ ಮಾಡುವುದಕ್ಕಾಗಿ ಸಹಕಾರ ಭಾರತಿಯಂತಹ ಸಂಘಟನೆಗಳ ಅಗತ್ಯತೆಯನ್ನು ಕಂಡು ದಿ ಲಕ್ಷ್ಮಣರಾವ ಇನಾಮದಾರ 1978ರಲ್ಲಿ ಈ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ.

**ಶ್ರೀ ಎಮ್.ಜಿ.ಪಾಟೀಲ್, ಅಧ್ಯಕ್ಷರು, ಸಹಕಾರ ಭಾರತಿ, ಕರ್ನಾಟಕ :** ಶ್ರೀ ಎಮ್.ಜಿ.ಪಾಟೀಲ, ಅಧ್ಯಕ್ಷರು ಮಾತನಾಡಿ ಸಹಕಾರ ಭಾರತಿ ಕರ್ನಾಟಕ ಕಳೆದ 4 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ರಾಷ್ಟ್ರೀಯ ಸಹಕಾರ ಸಮಾವೇಶವನ್ನು ನಡೆಸಿತ್ತು. ಆ ಸಂದರ್ಭದಲ್ಲಿ ಅನೇಕ ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳು ಹಾಗೂ ರಾಜ್ಯ ಸರಕಾರ ಧನ ಸಹಾಯವನ್ನು ನೀಡಿ, ಸಮಾವೇಶವನ್ನು ಯಶಸ್ವಿಯಾಗಿಸಲು ಸಹಕರಿಸಿದ್ದವು. ಈ ಸಮಾವೇಶದಲ್ಲಿ ಉಳಿದಿದ್ದ ಹಣವನ್ನು ಉಪಯೋಗಿಸಿ ಸಹಕಾರ ಭಾರತಿ, ಕರ್ನಾಟಕ ತನ್ನದೇ ಆದ ಕಛೇರಿ ಕಟ್ಟಡವನ್ನು ಹೊಂದಲಿಕ್ಕೆ ಸಾಧ್ಯವಾಯಿತು. ಈ ಕಾರ್ಯಕ್ಕೆ ಸಹಕರಿಸಿದ ಎಲ್ಲಾ ಸಹಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿ, ಸಹಕಾರ ಭಾರತಿಯ ಮುಂಬರುವ ಕಾರ್ಯಕ್ರಮಗಳಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ, ಸಹಕಾರ ಭಾರತಿಯನ್ನು ಒಂದು ಉತ್ತಮ ಸಹಕಾರಿ ಮಾರ್ಗದರ್ಶಿ ಸಂಸ್ಥೆಯನ್ನಾಗಿಸಲು ಸಹಯೋಗ ನೀಡಲು ಕೋರಿದರು. ಸಮಾರಂಭದಲ್ಲಿ ಸಹಕಾರ ಭಾರತಿಯ ಪ್ರಥಮ ಪ್ರಭಾರ ಶ್ರೀ ಮದನ ದಾಸಜಿಯವರನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ಸಹಕಾರ ಭಾರತಿ ಸಂಘಟನಾ ಪ್ರಮುಖರಾದ ಶ್ರೀ ರಮೇಶ ವೈದ್ಯರವರು ಅತಿಥಿ ಗಣ್ಯರನ್ನು ಸ್ವಾಗತಿಸಿದರು. ನಂತರ ಕರ್ನಾಟಕ ಸಹಕಾರ ಭಾರತಿಯ ಸಂಘಟನಾ ಪ್ರಮುಖರಾದ ಶ್ರೀ ಎಸ್.ಆರ್.ಸತೀಶಚಂದ್ರರವರು ಹಾಗೂ ಮುಂಬೈನ ಶ್ರೀ ಉದಯ ಜೋಶಿಯವರು ಪ್ರಾಸ್ತಾವಿಕ ಮಾತುಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪುರ ಸೇರಿದಂತೆ ನಿರ್ದೇಶಕರುಗಳಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಸಣ್ಣಸೂಗಪ್ಪ, ಶ್ರೀ ವೈ.ಟಿ.ಪಾಟೀಲ್, ಶ್ರೀ ಎಲ್.ಎಸ್.ಆನಂದ, ಕ್ಯಾಂಪ್ಕೋನ ನಿರ್ದೇಶಕರು, ಮಾಮ್ಕೋಸ್‌ನ ಉಪಾಧ್ಯಕ್ಷರಾದ ಶ್ರೀ ಯಡಗೆರೆ ಸುಬ್ರಮಣ್ಯ ಹಾಗೂ ನಿರ್ದೇಶಕರು, ಅನೇಕ ಸಹಕಾರ ಮುಖಂಡರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**1. ವಾರ್ಷಿಕ ಮಹಾಸಭೆಯಲ್ಲಿ ಲೆಕ್ಕಪರಿಶೋಧಕರ ಹಾಗೂ ಲೆಕ್ಕಪರಿಶೋಧನಾ ಶುಲ್ಕ ನಿಗದಿಪಡಿಸಿದನ್ವಯ, ಒಂದು ವೇಳೆ ಅದನ್ನು ಸನ್ನದು ಲೆಕ್ಕಪರಿಶೋಧಕರು ಒಪ್ಪಿಕೊಳ್ಳದಿದ್ದ ಪಕ್ಷದಲ್ಲಿ ಪರ್ಯಾಯ ವ್ಯವಸ್ಥೆ ಏನು? ಇನ್ನೊಮ್ಮೆ ಮಹಾಸಭೆ ಕರೆಯಬೇಕೇ?**

**ಉತ್ತರ:** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23 (3), 33 (1)ರನ್ವಯ ಸಹಕಾರಿಯ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ಸಹಕಾರಿಯ ಸಾಮಾನ್ಯ ನಿಕಾಯದ ಸಭೆಯಲ್ಲಿ ನೇಮಕಾತಿ ಮಾಡಿಕೊಳ್ಳಬೇಕಿರುತ್ತದೆ ಮತ್ತು 33 (19)ರನ್ವಯ ಮತ್ತು ಅವರ ಸಂಭಾವನೆಯನ್ನು ಸಾಮಾನ್ಯ ನಿಕಾಯದ ಸಭೆಯಲ್ಲೇ ನಿಗದಿಪಡಿಸ ಬೇಕಿರುತ್ತದೆ. ಅಲ್ಲದೇ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ:8ಬಿ(8)ರನ್ವಯ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಸಾಮಾನ್ಯ ಸಭೆ ನಡೆಸಿದ ಏಳು ದಿವಸಗೊಳಗಾಗಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ತಿಳಿಸತಕ್ಕದ್ದು.

ಯಾವುದೇ ಸಹಕಾರಿಯು ಲೆಕ್ಕಪರಿಶೋಧಕರ ಹೆಸರನ್ನು ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡುವುದಕ್ಕೂ ಪೂರ್ವದಲ್ಲಿ ಅಂತಹ ಲೆಕ್ಕಪರಿಶೋಧಕರಿಗೆ ಸಹಕಾರಿಯ ಲೆಕ್ಕಪರಿಶೋಧನೆಗಾಗಿ ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡುತ್ತಿರುವ ಸನ್ನದು ಲೆಕ್ಕಪರಿಶೋಧಕರೊಡನೆ ಸಮಾಲೋಚಿಸಿ, ಅವರ ಅಭಿಪ್ರಾಯವನ್ನು ಪಡೆದು ಸಾಮಾನ್ಯ ಸಭೆಗೆ ಸದರಿಯವರ ಹೆಸರನ್ನು ಶಿಫಾರಸ್ಸು ಮಾಡಿದಲ್ಲಿ ಲೆಕ್ಕಪರಿಶೋಧನೆಗೆ ಒಪ್ಪಿಕೊಳ್ಳದಿರುವ ಸಾಧ್ಯತೆ ಕಡಿಮೆ ಇರುತ್ತದೆ. ಇದರ ಹೊರತಾಗಿಯೂ ಸಹ ಸಹಕಾರಿಯ ಸಾಮಾನ್ಯ ಸಭೆಗೆ ನಾಲ್ಕರಿಂದ ಐದು ಹೆಸರು ಮಂಡಿಸಿ, ಅದರಲ್ಲಿ ಕನಿಷ್ಠ ಇಬ್ಬರು ಸನ್ನದು ಲೆಕ್ಕಪರಿಶೋಧಕರ ಹೆಸರನ್ನು ಅಂತಿಮಗೊಳಿಸಿಕೊಂಡು ನಿರ್ಣಯವನ್ನು ಸ್ವೀಕರಿಸುವಾಗ ಪ್ರಥಮ ಆದ್ಯತೆಯ ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಗೆ ನಿರಾಕರಿಸಿದಲ್ಲಿ ಎರಡನೆಯ ಆದ್ಯತೆಯ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸಲು ನಿರ್ಣಯಿಸಿದಲ್ಲಿ ಅದರಂತೆ ಮುಂದುವರೆಯಬಹುದಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಪ್ರಥಮ ಆದ್ಯತೆಯ ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಗೆ ನಿರಾಕರಿಸಿದಲ್ಲಿ ಪುನಃ ವಾರ್ಷಿಕ ಸಾಮಾನ್ಯ ಸಭೆ ಕರೆಯುವ ಅವಶ್ಯಕತೆಯಿರುವುದಿಲ್ಲ. (ಗಮನಿಸಿ: ಕಾಯ್ದೆಯಲ್ಲಿ 'ಮಹಾ ಸಭೆ' ಎಂಬ ಶಬ್ದದ ಉಲ್ಲೇಖವಿರುವುದಿಲ್ಲ)

**2. ಇತ್ತೀಚಿನ ತಿದ್ದುಪಡಿಯಂತೆ ವಾರ್ಷಿಕ ಮಹಾಸಭೆಯಲ್ಲಿ ಮುಂದಿನ ಎರಡು ವರ್ಷದ ಆಯ-ವ್ಯಯಕ್ಕೆ ಮಂಜೂರು ಪಡೆಯಬೇಕು. ಒಂದರ ಬದಲಿ ಎರಡು ಯಾಕೆ ಅಂತ ಕಾರಣ ತಿಳಿಸಿ.**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23 (3) (ಹೆಚ್)ರನ್ವಯ ಮುಂದಿನ ಸಹಕಾರ ವರ್ಷದ ಬಜೆಟ್ಟಿನ ಅನುಮೋದನೆಯನ್ನು ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಪಡೆಯಬೇಕಿರುತ್ತದೆ. ಆದರೆ, ಸಹಕಾರಿಯು ಸಾಮಾನ್ಯವಾಗಿ ತನ್ನ ವಾರ್ಷಿಕ ಸಾಮಾನ್ಯ ಸಭೆಯನ್ನು ಮಾರ್ಚ್ 31ರ ನಂತರ ಮತ್ತು ಸೆಪ್ಟೆಂಬರ್ 25ರ ಒಳಗಾಗಿ ನಡೆಸುತ್ತದೆ. ಇಂತಹ ಸಾಮಾನ್ಯ ಸಭೆಯಲ್ಲಿ ಬಜೆಟ್‌ಗೆ ಅನುಮೋದನೆ ಪಡೆದುಕೊಳ್ಳಲಾಗುತ್ತದೆ. ಅಂದರೆ ಸಹಕಾರಿಯು ಸಹಕಾರಿ ವರ್ಷ ಆರಂಭವಾಗಿ ಕೆಲವು ದಿನ ಅಥವಾ ತಿಂಗಳುಗಳ ನಂತರ ಬಜೆಟ್‌ನ್ನು ಮಂಡಿಸಿ, ಅನುಮೋದನೆ ಪಡೆದುಕೊಳ್ಳಲಾಗುತ್ತದೆ. ಅಲ್ಲಿಯವರೆಗೂ ಸಾಮಾನ್ಯ ಸಭೆಯ ಅನುಮೋದನೆಯಿಲ್ಲದೇ ವೆಚ್ಚ ಮಾಡಲಾಗುತ್ತದೆ. ಸಹಕಾರಿಯು ಮಾಡುವ ವೆಚ್ಚಕ್ಕೆ ಸಾಮಾನ್ಯ ಸಭೆಯ ಅನುಮೋದನೆ ಕಡ್ಡಾಯ. ಎರಡು ವರ್ಷಗಳ ಬಜೆಟ್‌ಗೆ ಅನುಮೋದನೆ ಪಡೆದುಕೊಳ್ಳುವುದರಿಂದ ಅನುಮೋದಿತವಾದ ಬಜೆಟ್‌ನ ವ್ಯಾಪ್ತಿಯಲ್ಲಿ ವೆಚ್ಚ ಮಾಡಲು ಅವಕಾಶವಾಗುತ್ತದೆ.

**3. ಇತರೇ ನಿಧಿಗಳು : ಉದಾ: ಧರ್ಮಾರ್ಥ, ಸದಸ್ಯರ ಕ್ಷೇಮ ನಿಧಿ ಇತ್ಯಾದಿ ಸಹಕಾರಿಯಲ್ಲಿ ಬಳಸುವಾಗ ಸಂಯುಕ್ತ ಸಹಕಾರಿಯ ಪರವಾನಗಿಯ ಅವಶ್ಯಕತೆ ಇದೆಯೇ? ಇದಕ್ಕೆ ಮೌಲ್ಯದ ಮಿತಿ ಏನಾದರೂ ಇರಬಹುದಲ್ಲಾ?**

**ಉತ್ತರ:** ಯಾವುದೇ ನಿಧಿಗಳ ಉಪಯೋಗಕ್ಕೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯ ಅನುಮೋದನೆಯ ಅವಶ್ಯಕತೆಯಿರುವುದಿಲ್ಲ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (ಇ)ರನ್ವಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಶೇಷ ನಿಧಿಗಳ ರಚನೆ ಮತ್ತು ಅವುಗಳಿಗೆ ವಂತಿಗೆಯನ್ನು ಸಹಕಾರಿಯ ಉಪವಿಧಿಯಲ್ಲಿ ಸ್ಪಷ್ಟಪಡಿಸಿಕೊಳ್ಳಬೇಕಿರುತ್ತದೆ. ಆದ್ದರಿಂದ, ಸಹಕಾರಿಯು ಉಪವಿಧಿಯಲ್ಲಿ ಈ ಕುರಿತು ಪ್ರಾವಧಾನ ಕಲ್ಪಿಸಿಕೊಂಡಿರಬೇಕಾಗುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 23 (3) (ಕೆ)ರನ್ವಯ ಸಾಮಾನ್ಯ ಸಭೆಯು ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ, ಸಹಕಾರಿಯು ತಾನು ಬಳಸಿರುವ ನಿಧಿಯ ವಿವರವನ್ನು ಸಾಮಾನ್ಯ ಸಭೆಗೆ ಒದಗಿಸಬೇಕಿರುತ್ತದೆ. ಸಹಕಾರಿಯು ತಾನು ಗಳಿಸಿದ ಲಾಭವನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (ಥಥ)ರಲ್ಲಿ ತಿಳಿಸಿರುವಂತೆ ವಿವಿಧ ನಿಧಿಗಳಿಗೆ ವಿಲೇವಾರಿ ಮಾಡಿದ ನಂತರ ಉಳಿಯುವ ಲಾಭವನ್ನು ಉಪವಿಧಿಯಲ್ಲಿ ತಿಳಿಸಿರುವ ನಿಧಿಗಳಿಗೆ ಸಾಮಾನ್ಯ ಸಭೆಯು ನಿರ್ಣಯಿಸುವಷ್ಟು ದರದಲ್ಲಿ ಆದರೆ, ಉಪವಿಧಿಯ ಮಿತಿಗೊಳಪಟ್ಟು ವರ್ಗಾಯಿಸಬಹುದಾಗಿರುತ್ತದೆ. ಇದಕ್ಕೆ ಯಾವುದೇ ಮೌಲ್ಯದ ಮಿತಿ ಇರುವುದಿಲ್ಲ.

**4. ಸಹಕಾರಿಯು ತನ್ನದೇ ಆದ ಸ್ವಂತ ಕಟ್ಟಡ ಕಟ್ಟುವಾಗ ಸಂಯುಕ್ತ ಸಹಕಾರಿಯ ಪರವಾನಗಿಯ ಅವಶ್ಯಕತೆ ಇದೆಯೇ? ಕಟ್ಟಡ ಕಟ್ಟುವಾಗ ಕಟ್ಟಡ ನಿಧಿಯನ್ನು ಮಿಕ್ಕಿದಾಗ ದುಡಿಯುವ ಬಂಡವಾಳವು ಉಪಯೋಗಿಸಬಹುದೇ? ತಾಂತ್ರಿಕ ವಿಧಾನ ತಿಳಿಸಿ.**

**ಉತ್ತರ:** ಸಹಕಾರಿಯು ತನ್ನದೇ ಆದ ಸ್ವಂತ ಕಟ್ಟಡ ಕಟ್ಟುವಾಗ ಸಂಯುಕ್ತ ಸಹಕಾರಿಯ ಪರವಾನಗಿಯ ಅವಶ್ಯಕತೆ ಇರುವುದಿಲ್ಲ. ಕಟ್ಟಡವನ್ನು ಕಟ್ಟಲು ಸಹಕಾರಿಯ ದುಡಿಯುವ ಬಂಡವಾಳವನ್ನು ಉಪಯೋಗಿಸುವುದು ಸೂಕ್ತವಲ್ಲ. ಏಕೆಂದರೆ, ಸಹಕಾರಿಯ ದುಡಿಯುವ ಬಂಡವಾಳವನ್ನು ಉಪಯೋಗಿಸುವುದರಿಂದ ಸಹಕಾರಿಯು ಸದಸ್ಯರ ಶೇರು ಮತ್ತು ಠೇವಣಿಯಲ್ಲಿ ಕೊರತೆಯನ್ನು ಉಂಟು ಮಾಡಿದಂತಾಗುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ ಸಂಖ್ಯೆ 7 (1) (ಬಿ)ರನ್ವಯ ಸಹಕಾರಿಯು ಕಟ್ಟಡ ನಿಧಿಯನ್ನು ಹೊರತುಪಡಿಸಿ ಮೀಸಲು ನಿಧಿಯನ್ನು ಶೇ.80ರವರೆಗೆ ಸಾಮಾನ್ಯ ಸಭೆಯ ಅನುಮೋದನೆ ಪಡೆದುಕೊಂಡು ಬಳಸಿಕೊಳ್ಳಬಹುದು. ಆದರೆ, ಬಳಸಿಕೊಂಡಿರುವ ಮೊತ್ತವನ್ನು ಮುಂಬರುವ ವರ್ಷಗಳಲ್ಲಿ ಬರುವ ಲಾಭದಿಂದ ಮೀಸಲು ನಿಧಿಗೆ ಮರುಪೂರಣ ಮಾಡತಕ್ಕದ್ದು.

# ಅಮಲ್ಜಾರಿ (Excution Proceedings) ಅನುಸರಿಸಬೇಕಾದ ಕ್ರಮಗಳು

ಶ್ರೀ ಎಸ್.ಜಿ.ಜೋಷಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ)

... ಕಳೆದ ಸಂಚಿಕೆಯಿಂದ

ವಿವಾದಗಳು ಇತ್ಯರ್ಥಗೊಂಡ ನಂತರ ದಾವಾ ಪಂಚಾಯ್ತಿ ನ್ಯಾಯಾಲಯದಿಂದ ಐತೀರ್ಪು/ ಆದೇಶ/ ಅವಾರ್ಡಗಳನ್ನು ನೀಡಲಾಗುತ್ತದೆ. ಹೀಗೆ ಅವಾರ್ಡಗಳನ್ನು ಪಡೆದ ತಕ್ಷಣ ಸಂಬಂಧಪಟ್ಟ ಸುಸ್ತಿ ಸಾಲಗಾರರಿಗೆ/ ಜಾಮೀನುದಾರರಿಗೆ ಅವಾರ್ಡ್ ಸ್ವೀಕೃತವಾದ ಬಗ್ಗೆ ಮಾಹಿತಿ ನೀಡಿ, ಈ ಹಂತದಲ್ಲಾದರೂ ಸುಸ್ತಿ ಸಾಲವನ್ನು ಮರು ಪಾವತಿ ಮಾಡುವಂತೆ ಸಮಯದ ಗಡುವು ನಿಗದಿಪಡಿಸಿ ತಿಳುವಳಿಕೆ ಪತ್ರ ಕಳುಹಿಸಬೇಕು. ಹೀಗೆ ನಿಗದಿಪಡಿಸಿದ ಗಡುವು ಮುಕ್ತಾಯಗೊಂಡರೂ ಸುಸ್ತಿ ಸಾಲಗಾರರು ಸ್ಪಂದಿಸದಿದ್ದಲ್ಲಿ ಸಾಲ ವಸೂಲಾತಿಗಾಗಿ ಅಮಲ್ಜಾರಿ ಅರ್ಜಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 13 (1) ಮತ್ತು (2)ರ ಮೇರೆಗೆ (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿಯಲ್ಲಿ ನೋಂದಾಯಿಸಲಾದ ಸಹಕಾರಿ ಸಂಘಗಳು/ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 34 (1) ಮತ್ತು (2)ರ ಮೇರೆಗೆ) ಸಂಬಂಧಪಟ್ಟ ವಸೂಲಾಧಿಕಾರಿಗಳ ಕಛೇರಿಯಲ್ಲಿ ದಾಖಲು ಮಾಡುವುದು ಅನಿವಾರ್ಯವಾಗುತ್ತದೆ.

**ಅ) ಸೌಹಾರ್ದ ಸಹಕಾರಿ/ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರುಗಳು ಗಮನದಲ್ಲಿಡಬೇಕಾದ ಮುಖ್ಯಾಂಶಗಳು :**

1. ಅಮಲ್ಜಾರಿ ಅರ್ಜಿಗಳನ್ನು ದಾಖಲು ಮಾಡುವ ಮುಂಚೆ ಸುಸ್ತಿ ಸಾಲಗಾರರು / ಜಾಮೀನುದಾರರು ಜೀವಂತವಾಗಿದ್ದಾರೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅಕಸ್ಮಾತ್ತಾಗಿ ಯಾರಾದರೂ ಮೃತರಾಗಿದ್ದಲ್ಲಿ ತಕ್ಷಣ ಮೇಲೆ ಅ.ಸಂ.7ರಲ್ಲಿ ವಿವರಿಸಿದಂತೆ ಕ್ರಮವಿಡಬೇಕು ಮತ್ತು ಮಾರ್ಪಡಿಸಲಾದ ಅವಾರ್ಡ ಪಡೆದು ಅನಂತರ ಅಮಲ್ಜಾರಿ ಅರ್ಜಿ ದಾಖಲು ಮಾಡಬೇಕು. ಒಂದು ವೇಳೆ ಅಮಲ್ಜಾರಿ ಅರ್ಜಿ ದಾಖಲು ಮಾಡಿದ ನಂತರ ವಸೂಲಾತಿ ಕ್ರಮ ಜಾರಿಯಲ್ಲಿರುವ ಅವಧಿಯಲ್ಲಿ ಮೃತರಾದ ವಿಷಯ ತಿಳಿದುಬಂದಲ್ಲಿ ತಕ್ಷಣ ಅ.ಸಂ.7ರಲ್ಲಿ ವಿವರಿಸಲಾದ ಕ್ರಮವನ್ನೇ ಅನುಸರಿಸಿ ಸೂಕ್ತ ದಾಖಲಾತಿಗಳ ಸಮೇತ ವಸೂಲಾಧಿಕಾರಿಯವರಲ್ಲಿ ಅರ್ಜಿ ಸಲ್ಲಿಸಬೇಕು.
2. ಅಮಲ್ಜಾರಿ ಅರ್ಜಿಗಳನ್ನು ದಾಖಲು ಮಾಡುವ ಸಮಯದಲ್ಲಿ ಸುಸ್ತಿ ಸಾಲಗಾರರು/ ಜಾಮೀನುದಾರರು ಈ ಮುಂಚೆ ಸೌಹಾರ್ದ ಸಹಕಾರಿ/ ಬ್ಯಾಂಕಿಗೆ ನೀಡಿದ ವಿಳಾಸದಲ್ಲೇ ವಾಸವಾಗಿದ್ದಾರೆಯೇ? ಅಥವಾ ಬೇರೆ ವಿಳಾಸದಲ್ಲಿದ್ದಾರೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ ಸರಿಯಾದ ವಿಳಾಸವನ್ನು ಖಚಿತಪಡಿಸಿಕೊಂಡ ನಂತರವೇ ಅರ್ಜಿಯಲ್ಲಿ ನಮೂದಿಸಿ ದಾಖಲು ಮಾಡಬೇಕು. ಅಮಲ್ಜಾರಿ ಅರ್ಜಿ ದಾಖಲು ಮಾಡುವ ಮುಂಚೆ ಅಥವಾ ನಂತರ ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ/ ನಿರ್ಬಂಧಾಜ್ಞೆಗಳಿದ್ದಲ್ಲಿ ವಿವರಗಳೊಂದಿಗೆ ತಕ್ಷಣ ಮಾರಾಟಾಧಿಕಾರಿಗಳ ಹಾಗೂ ವಸೂಲಾಧಿಕಾರಿಗಳ ಗಮನಕ್ಕೆ ತರಬೇಕು.
3. ಅಮಲ್ಜಾರಿ ಅರ್ಜಿಯೊಂದಿಗೆ 'ಚೆಕ್ ಲಿಸ್ಟ್' ಲಗತ್ತಿಸಿರಬೇಕು. ಚೆಕ್‌ಲಿಸ್ಟ್‌ನಲ್ಲಿ ಎಲ್ಲಾ ಮಾಹಿತಿಯನ್ನು ತಪ್ಪದೇ ನಮೂದಿಸಿರಬೇಕು. ಯಾವುದೇ ಕಾಲಂ ಖಾಲಿ ಬಿಡಕೂಡದು. ಸಂಪೂರ್ಣ ಸಾಲ ವಸೂಲಾತಿಯ ನಂತರ ಈ ಚೆಕ್‌ಲಿಸ್ಟ್‌ನ್ನು ಸಂಬಂಧಪಟ್ಟ ಕಡತದಿಂದ ಬೇರ್ಪಡಿಸಿ ಸಾಲಗಾರರ/ ಜಾಮೀನುದಾರರ ಹೆಸರುಗಳನ್ನಾಧರಿಸಿ (ಅಲ್ಫಾಬೆಟಿಕಲಿ) ಕ್ರಮಬದ್ಧವಾಗಿ ಜೋಡಿಸಬೇಕು. ಇವು ಸೌಹಾರ್ದ ಸಹಕಾರಿ/ ಬ್ಯಾಂಕಿಗೆ ಬಹುವರ್ಷಗಳವರೆಗೆ ಉಪಯುಕ್ತ ದಾಖಲಾತಿಗಳಾಗಬಲ್ಲವು.
4. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 13(1) ಮತ್ತು (2)ರ ಮೇರೆಗೆ ನಿಗದಿತ ನಮೂನೆಯಲ್ಲಿರುವ ನಮೂನೆ–3 (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರಡಿಯಲ್ಲಿ ನೋಂದಾಯಿಸಲಾದ ಸಹಕಾರಿ ಸಂಘಗಳು/ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 34 (1) ಮತ್ತು (2)ರ ಮೇರೆಗೆ ನಿಗದಿತ ನಮೂನೆಯಲ್ಲಿರುವ ಫಾರ್ಮ್–1) ಇದು ಸೌಹಾರ್ದ ಸಹಕಾರಿ/ ಬ್ಯಾಂಕು ವಸೂಲಾಧಿಕಾರಿಗಳಲ್ಲಿ ಮಾಡಿಕೊಳ್ಳುವ ಅಮಲ್ ಬಜಾವಣೆ ಅರ್ಜಿ. ಬ್ಯಾಂಕಿನ ವತಿಯಿಂದ ಅಮಲ್ಜಾರಿ ಅರ್ಜಿ ದಾಖಲು ಮಾಡಲು ಅಧಿಕಾರ ಹೊಂದಿದ ಮುಖ್ಯಕಾರ್ಯನಿರ್ವಾಹಕರು ಸೌಹಾರ್ದ ಸಹಕಾರಿ/ ಬ್ಯಾಂಕಿನ ಸೂಕ್ತ ಠರಾವಿನ ನಕಲಿನೊಂದಿಗೆ ಹಾಗೂ ಈ ಕುರಿತು ಸಹಕಾರ ಇಲಾಖ ನಿಗದಿಪಡಿಸಿದ ಅಮಲ್ಜಾರಿ ಶುಲ್ಕವನ್ನು ಭರಣಾ ಮಾಡಿದ ಬಗ್ಗೆ ಸೂಕ್ತ ದಾಖಲಾತಿಯೊಂದಿಗೆ ಅರ್ಜಿ ದಾಖಲು ಮಾಡಬೇಕು. ಇಲ್ಲಿ ಸೌಹಾರ್ದ ಸಹಕಾರಿ/ ಬ್ಯಾಂಕು ತಾನು ವಸೂಲಾತಿಗೆ ಯಾವ ತೆರನಾದ ಕ್ರಮ ಬಯಸುತ್ತದೆ ಅಂದರೆ ಮೊದಲು ಚರಾಸ್ತಿ ಜಪ್ತಿ ರೀತಿಯಿಂದ ಬಾಕಿ ಉಳಿದಲ್ಲಿ ನಂತರ ಸ್ಥಿರಾಸ್ತಿ ಜಪ್ತಿ ಮತ್ತು ಮಾರಾಟದಿಂದ ಇಲ್ಲವೇ ಎರಡೂ ಮಾರ್ಗಗಳಿಂದ ಬಯಸುತ್ತದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಅರ್ಜಿಯ ಹಿಂಭಾಗದಲ್ಲಿ ಅತೀ ಮಹತ್ವದ ಮಾಹಿತಿಗಳು ಲಭ್ಯವಾಗುತ್ತವೆಯಾದ್ದರಿಂದ ಎಲ್ಲಾ ಮಾಹಿತಿಯನ್ನು ಸಂಪೂರ್ಣವಾಗಿ ಒದಗಿಸಬೇಕು. ಇದರಿಂದ ಜಪ್ತಿ ಹಾಗೂ ಮಾರಾಟಕ್ಕೆ ಬಹಳ ಅನುಕೂಲವಾಗುತ್ತದೆ.
5. ಸ್ಥಿರಾಸ್ತಿ ಮಾರಾಟದಿಂದ ಸಾಲ ವಸೂಲಾತಿ ಪ್ರಕರಣಗಳಲ್ಲಿ ಇತ್ತೀಚಿನ ಇಸಿ (ಎನ್‌ಕಂಬರನ್ಸ ಸರ್ಟಿಫಿಕೇಟ್) ಮತ್ತು ಅನುಮೋದಿತ ಹಾಗೂ ಲೈಸೆನ್ಸ್ ಹೊಂದಿದ ಮೌಲ್ಯಮಾಪಕರಿಂದ ಮೌಲ್ಯಮಾಪನ ಪ್ರಮಾಣಪತ್ರಗಳನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕು. ತಕ್ಷಣ ಲಭ್ಯವಿಲ್ಲದಿದ್ದ ಪ್ರಸಂಗದಲ್ಲಿ ಅನಂತರ ಸಕಾಲದಲ್ಲಿ ಮಾರಾಟಾಧಿಕಾರಿಗೆ ಒದಗಿಸಬೇಕು.



ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ – 5

# "ಕಗ್ಗ ಪದ್ಯಗಳಲ್ಲಿ ಸಹಕಾರದ ಕಂಪು" ದೈವ ಸೃಷ್ಠಿಯ ಉತ್ತುಂಗ – ಮಾನವ

ಶ್ರೀ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಸನ್ಮಾನ್ಯ ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗದಲ್ಲಿ ಪ್ರಸ್ತಾಪಿಸದ ವಿಷಯಗಳೇ ಇಲ್ಲ. ಮಾನವನ ಹುಟ್ಟಿನಿಂದ ಚಟ್ಟದವರೆಗೆ ಪ್ರಾಪ್ತವಾಗುವ ಎಲ್ಲಾ ಹಂತಗಳ ಬಗ್ಗೆಯೂ ಉಲ್ಲೇಖವಿದೆ. ಇಂತಹ ಮಾನವನನ್ನು ಸೃಷ್ಠಿ ಸ್ಥಿತಿ ಲಯ ಕರ್ತವಾದ, ಆದಿ ಮಧ್ಯಂತರಹಿತನಾದ ಭಗವಂತನು ಅತ್ಯುತ್ಕೃಷ್ಟ ರಚನೆಯಾಗಿ ಸೃಷ್ಠಿಸಿದ್ದಾನೆಂಬ ಬಗ್ಗೆ ಡಿ.ವಿ.ಜಿ.ಯವರು ಮಾನವನ ದೇಹದ ರಚನೆಯ ವಿಶಿಷ್ಟತೆಯ ಬಗ್ಗೆ ಪ್ರಸ್ತಾಪಿಸುತ್ತಾ ಅವನನ್ನು ಸೃಷ್ಠಿ ಶೈಲದ ಶಿಖರವೆಂದಿದ್ದಾರೆ. ಭಗವಂತನು ಮಾನವನನ್ನು ಸೃಷ್ಠಿಸುವಾಗ್ಗೆ ತನ್ನೆಲ್ಲ ಜಾಣ್ಮೆ ಕೌಶಲಗಳನ್ನು ಬಳಸಿ, ಧಾರೆಯೆರೆದು ಶಿಖರ ಪ್ರಾಯ ರಚನೆಗೈದಿದ್ದಾನೆ. ದೇಹ ರಚನೆಯ ಬಗ್ಗೆ ವಿವರಣೆಯಿರುವ ಈ ಚಮತ್ಕಾರಿಕ ಪದ್ಯವನ್ನು ಗಮನಿಸಿ.

"**ಎಷ್ಟು ಬಗೆ ಯಂತ್ರಗಳೊಳ್ ಎಷ್ಟು ರಸಮಿಶ್ರದಿಂ :** ದೆಷ್ಟಾದಿ ಭೂತಗಳು ಪರಿಪಾಕ ಹೊಂದಿ : ಒಟ್ಟು ಸೇರಿಹವು ನರನೆಂಬ ಸಿದ್ಧಿಯೊಳವನು : ಸೃಷ್ಠಿ ಶೈಲದ ಶಿಖರ ಮಂಕುತಿಮ್ಮ"

ದೇಹದ ಅಂಗ ರಚನೆಯ ಪ್ರಕಾರ ಶಿರೋಭಾಗ, ಉದರಭಾಗ ಹಾಗೂ ಕೈಕಾಲುಗಳೆಂದು ವಿಂಗಡಿಸಲ್ಪಡಲಾಗಿದ್ದು, ಅವುಗಳ ಯಶಸ್ವಿ ಕಾರ್ಯಚರಣೆಗೆ ಅವಶ್ಯಕವಾದ ರಸಗಳು ಹಾಗೂ ಪಂಚಭೂತಗಳು ಸಮಸ್ಥಿತಿಯಲ್ಲಿ ಸೇರಿ ಪರಿಪಾಕ ಹೊಂದಿ, ಆಕರ್ಷಣೆಯ ದೇಹ ರಚನೆಯಾಗಿದೆಯೆಂದೂ ಅಂತಹ ದೇಹದ ವಿವಿಧ ಭಾಗಗಳಿಗಿರುವ ಅನ್ಯೋನ್ಯತೆಯನ್ನು ವಿಶ್ಲೇಷಿಸಿ ನೋಡಿದಾಗ ಅವುಗಳೊಳಗಿನ ಸಹಕಾರ ಊಹಿಸಲಸದಳವೆಂದಿದ್ದಾರೆ. ಕಾಲಿಗೊಂದು ಮುಳ್ಳು ಒಕ್ಕಿದಾಗ, ತಕ್ಷಣ ಆದ ನೋವಿನ ಮಾಹಿತಿಯನ್ನು ನರಗಳು ಮೆದುಳಿಗೆ ರವಾನಿಸಿ, ತದನಂತರ ಮೆದುಳು ನರಕೋಶಗಳ ಮೂಲಕ ಕೈಗೆ ನಿರ್ದೇಶನ ನೀಡಿ, ಒಕ್ಕಿದ ಮುಳ್ಳನ್ನು ತೆಗೆದು ಆಗಿರುವ ನೋವನ್ನು ನಿವಾರಿಸುವ ತಾತ್ಕ್ಷಣಿಕ ಕ್ರಿಯೆಯನ್ನು ಪರಿಶೀಲಿಸಿದಾಗ ಅಂಗಾಂಗಗಳಲ್ಲಿರುವ "ಸಹಕಾರ" ಹುಬ್ಬೇರುವಂತೆ ಮಾಡುತ್ತದೆ. ಹೇಗೆ ದೇಹ ಹಾಗೂ ನಿಸರ್ಗಗಳಲ್ಲಿ ಅಂತರ್ಗತವಾದ ಸಹಕಾರ ಹಾಸುಹೊಕ್ಕಾಗಿದೆಯೋ ಅಂತಹುದೇ ನೈಜ ಸಹಕಾರವನ್ನು ಸಹಕಾರ ಕ್ಷೇತ್ರದಲ್ಲಿ ಅಳವಡಿಸಿ ಎಂಬ ಮಾರ್ಮಿಕ ಸಂದೇಶವನ್ನು ಈ ಪದ್ಯದ ಮೂಲಕ ನೀಡುತ್ತಾ ಭಗವಂತನ ಉತ್ಪನ್ನಗಳಾದ ಚರಾಚರಗಳಲ್ಲಿ ಮಾನವ ದೇಹವು ಸೃಷ್ಠಿ ಶೈಲದ ಶಿಖರವೆಂದು ಉದ್ಘೋಷಿಸಿರುತ್ತಾರೆ. ಇಂತಹ ಶಿಖರಪ್ರಾಯ ಸೃಷ್ಠಿಯಾದ ಮಾನವನು ತನ್ನ ಬದುಕನ್ನು ಉದಾಹರಣಾರ್ಥವಾಗಿ ನಡೆಸಬೇಕಲ್ಲವೇ? ಸಹಕಾರ ಜೀವನದ ಪದ್ಧತಿಯನ್ನು ಮೈಗೂಡಿಸಿಕೊಳ್ಳಿ ತನ್ಮೂಲಕ ಸಮಾಜದ ಅಭಿವೃದ್ಧಿಯನ್ನು ಸಾಧಿಸುತ್ತಾ ವೈಯಕ್ತಿಕ ಜೀವನವನ್ನು ವರ್ಧಿಸಿ, ವೃದ್ಧಿಸಿ ಅಭಿವೃದ್ಧಿಸಿಕೊಳ್ಳಿ ಎಂಬುದಾಗಿದೆ.

ಈ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17 (2) (ಇ) ಗಮನಿಸಬೇಕು. (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರಡಿಯಲ್ಲಿ ನೋಂದಾಯಿಸಾಲಾದ ಸಹಕಾರಿ ಸಂಘಗಳು/ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 38 (2) (ಇ) ಗಮನಿಸಬೇಕು)

6. ಅಮಲ್ಜಾರಿ ಅರ್ಜಿಯ ಮುಖಪತ್ರ/ ಕಛೇರಿ ಟಿಪ್ಪಣಿ/ ಫೇಸಿಂಗ್ ಶೀಟ್ ಇದನ್ನು ಸಂಪೂರ್ಣ ಭರ್ತಿ ಮಾಡಿ ಅರ್ಜಿಯೊಂದಿಗೆ ಲಗತ್ತಿಸಿರಬೇಕು. ಸಾಲ ವಸೂಲಾತಿಗಾಗಿ ವಸೂಲಾಧಿಕಾರಿಗಳು ಮಾರಾಟಾಧಿಕಾರಿಗೆ ಅಧಿಕಾರ ನೀಡುವ ಆದೇಶವನ್ನು ಇದು ಒಳಗೊಂಡಿರುತ್ತಾದ್ದರಿಂದ ಇದೊಂದು ಮಹತ್ವದ ದಾಖಲಾತಿ ಎಂದು ಪರಿಗಣಿಸಲ್ಪಡುತ್ತದೆ.
7. ಮೂಲ ಅವಾರ್ಡ್ ಪ್ರತಿಯನ್ನು ಅರ್ಜಿಯೊಂದಿಗೆ ತಪ್ಪದೇ ಲಗತ್ತಿಸಿರಬೇಕು.
8. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 13 (3) ರ ಮೇರೆಗೆ ನಿಗದಿಪಡಿಸಲಾದ ನಮೂನೆ–4 (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರಡಿಯಲ್ಲಿ ನೋಂದಾಯಿಸಲಾದ ಸಹಕಾರಿ ಸಂಘಗಳು/ ಬ್ಯಾಂಕುಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 34 (3)ರ ಮೇರೆಗೆ ನಿಗದಿಪಡಿಸಲಾದ ಫಾರ್ಮ್–2) ಭರ್ತಿ ಮಾಡಿ ಲಗತ್ತಿಸಿರಬೇಕು. ಈ ನಮೂನೆ ಪ್ರತಿಗಳು–ಒಟ್ಟು ಪ್ರತಿವಾದಿಗಳ ಸಂಖ್ಯೆ +1. ಹೀಗೆ ಅಮಲ್ಜಾರಿ ಅರ್ಜಿ ಪ್ರಸ್ತಾವನೆ ಪರಿಪೂರ್ಣವಾಗಿದೆ ಎಂದು ಪರಿಗಣಿಸಲು ಕೆಳಕಾಣಿಸಿದ ಎಲ್ಲ ದಾಖಲೆಗಳನ್ನು ತಪ್ಪದೇ ಒಳಗೊಂಡಿರಬೇಕಾಗುತ್ತದೆ.

**ಚೆಕ್‌ಲಿಸ್ಟ್ :**

- ನಮೂನೆ–3/ ನಮೂನೆ–1 (ಯಾವುದು ಅನ್ವಯವಾಗುತ್ತದೋ ಆ ನಮೂನೆ/ ಫಾರ್ಮ್).
- ಅಮಲ್ಜಾರಿ ಅರ್ಜಿಯ ಮುಖಪತ್ರ/ ಕಛೇರಿ ಟಿಪ್ಪಣಿ/ ಫೇಸಿಂಗ್ ಶೀಟ್.
- ನಮೂನೆ–4/ ನಮೂನೆ–2 (ಯಾವುದು ಅನ್ವಯವಾಗುತ್ತದೋ ಆ ನಮೂನೆ/ ಫಾರ್ಮ್) ಇದನ್ನು ಜಪ್ತಿ ಹುಕುಂ, ತಗಾದೆ ಪತ್ರ ಹಾಗೂ ಡಿಸ್ಟ್ರೆಂಟ್ ವಾರಂಟ್ ಎಂದು ಕೂಡಾ ಕರೆಯಲಾಗುತ್ತದೆ.
- ಆಡಳಿತ ಮಂಡಲಿ ಸಭೆಯ ನಡವಳಿಕೆಯ ಉದೃತ ಭಾಗ (ಎಕ್ಸಟ್ರ್ಯಾಕ್ಟ್).
- ಮೂಲ ಅವಾರ್ಡ್ ಪ್ರತಿ.
- ಅಮಲ್ ಬಜಾವಣೆ ಶುಲ್ಕ ಕಟ್ಟಿದ ಬಗ್ಗೆ ದಾಖಲಾತಿ.

9. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ 43, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 13 ರಿಂದ 27 ಮತ್ತು ಸಿಪಿಸಿ 1908ರ ಕಲಂ 60 ರಲ್ಲಿನ ವಿವರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರಡಿಯಲ್ಲಿ ನೋಂದಾಯಿಸಲಾದ ಸಹಕಾರಿ ಸಂಘಗಳು/ ಬ್ಯಾಂಕುಗಳು ಸದರಿ ಕಾಯ್ದೆ ಕಲಂ 101 ಮತ್ತು 101 ಬಿ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 34 ರಿಂದ 49 ಮತ್ತು ಸಿಪಿಸಿ 1908ರ ಕಲಂ 60 ರಲ್ಲಿನ ವಿವರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು)

# ದಾವಾ ಪಂಚಾಯಿತಿ ಶುಲ್ಕ ಹಾಗೂ ಅಮಲ್ಜಾರಿ ಫೀಯನ್ನು ಪರಿಷ್ಕರಿಸಿ ನಿಗದಿಪಡಿಸಿರುವ ಬಗ್ಗೆ ನಿಬಂಧಕರ ಅಧಿಸೂಚನೆ

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಕ್ರಮಾಂಕ:ಆರಸಿಎಸ್:ಜೆಎಂಸಿ: –8:9 :2003–04.** **ಸಹಕಾರ ಸಂಘಗಳ ನಿಬಂಧಕರ ಕಛೇರಿ,** ನಂ.1 ಅಲಿ ಅಸ್ಕರ ರಸ್ತೆ, ಬೆಂಗಳೂರು – 52

**ದಿನಾಂಕ : 03–08–2003.**

ವಿಷಯ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ನಿಯಮ 31(5) (ಎ) ರನ್ವಯ ಹೂಡಲಾಗುವ ಪಂಚಾಯತ ದಾವಾ ಪ್ರಕರಣಗಳಿಗೆ ಸಂಬಂಧಿಸಿದಂತೆ ವಾದಿಗಳು ಪಾವತಿಸಬೇಕಾದ ಪಂಚಾಯತ ದಾವಾ ಶುಲ್ಕ ಹಾಗೂ ಅಮಲ್ಜಾರಿ ಫೀ ಯನ್ನು ಪರಿಷ್ಕರಿಸಿ ನಿಗದಿಪಡಿಸುವ ಬಗ್ಗೆ.

**ಉಲ್ಲೇಖ: 1. ಸರ್ಕಾರದ ಆದೇಶ ಕ್ರ:ಸಿಎಂಡಬ್ಲ್ಯೂ:01:ಸಿಎಲ್ಎಂ:2003, ದಿನಾಂಕ 28.03.2003**

**2. ಈ ಕಛೇರಿಯ ಅಧಿಸೂಚನೆ ಕ್ರಮ ಸಂಖ್ಯೆ:ಅನಿ(ಕೈ:ಇ):ಡಿಎಂಸಿ:ಡಿ8:41:99–2000, ದಿನಾಂಕ 17.09.2001**

**: ಅಧಿಸೂಚನೆ :**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರವು ಉಲ್ಲೇಖಿತ (1) ರ ಆದೇಶದಲ್ಲಿ 2003–04 ರಲ್ಲಿ ತೆರಿಗೆಯೇತರ ಆದಾಯವನ್ನು ಪರಿಷ್ಕರಿಸಿರುತ್ತದೆ. ಇದರಂತೆ, ಅಮಲ್ಜಾರಿ ಫೀ ಮತ್ತು ದಾವಾ ಫೀ ಯನ್ನು ಕೆಳಗಿನಂತೆ ಪರಿಷ್ಕರಿಸಲಾಗಿದೆ.

**1. ಅಮಲ್ಜಾರಿ ಫೀ**

| ಕ್ರ.ಸಂ. | ಮೊತ್ತ | ಪರಿಷ್ಕರಣೆ |
|---|---|---|
| 1. | ರೂ. 25,000/– ರವರೆಗೆ | ಶೇ.3 |
| 2. | ರೂ. 25,000/– ರಿಂದ 50,000/– ರವರೆಗೆ | ಶೇ.2.5 |
| 3. | ರೂ. 50,000/– ರಿಂದ 1,00,000/– ದವರೆಗೆ | ಶೇ.2 |
| 4. | ರೂ. 1,00,000/– ದಿಂದ 2,00,000/– ದವರೆಗೆ | ಶೇ.1.5 |
| 5. | ರೂ. 2,00,000/– ಲಕ್ಷ ಮತ್ತು ಮೇಲ್ಪಟ್ಟು | ಶೇ.1 |

**2. ಪಂಚಾಯತ ದಾವಾ ಪ್ರಕರಣಗಳು (ಮಾನಿಟರಿ ಡಿಸ್‌ಪ್ಯೂಟ್ಸ್)**

| ಕ್ರ.ಸಂ. | ಮೊತ್ತ | ಪರಿಷ್ಕರಣೆ |
|---|---|---|
| 1. | ರೂ. 5,000/– ವರೆಗೂ | ರೂ. 300/– |
| 2. | ರೂ. 5,001/–ರಿಂದ 25,000/– ರವರೆಗೆ | ರೂ. 500/– |
| 3. | ರೂ. 25,001/– ರಿಂದ 50,000/–ರವರೆಗೆ | ರೂ. 700/– |
| 4. | ರೂ. 50,001/– ರಿಂದ 1,00,000/– ರವರೆಗೆ | ರೂ. 1000/– |
| 5. | ರೂ. 1,00,000/– ರಿಂದ 2,00,000/– ರ ವರೆಗೆ | ರೂ. 1300/– |
| 5 | ರೂ. 2,00,000/– ರಿಂದ 5,00,000/– ರ ವರೆಗೆ | ರೂ. 1500/– |
| 6 | ರೂ. 5,00,000/– ಲಕ್ಷ ಅದಕ್ಕಿಂತ ಮೇಲ್ಪಟ್ಟು | ರೂ. 2000/– |
| 7. | ರೂ. 5,00,000/– ಲಕ್ಷ ಅದಕ್ಕಿಂತ ಮೇಲ್ಪಟ್ಟು | ರೂ. 2000/– |

**3. ದಾವಾ ಪ್ರಕರಣಗಳು (ನಾನ್–ಮಾನಿಟರಿ ಡಿಸ್‌ಪ್ಯೂಟ್ಸ್)**

| ಕ್ರ.ಸಂ. | ಮೊತ್ತ | ಪರಿಷ್ಕರಣೆ |
|---|---|---|
| 1 | ಜಿಲ್ಲಾ ಮಟ್ಟದ ಆಡಳಿತ ವ್ಯಾಪ್ತಿ ಇರುವ ಸಹಕಾರ ಸಂಸ್ಥೆಗಳಿಗೆ | ರೂ. 500/– |
| 2 | ಜಿಲ್ಲಾ ಮಟ್ಟಕ್ಕಿಂತ ಮೇಲ್ಪಟ್ಟು ವಿಭಾಗ ಮಟ್ಟದ ಒಳಗೆ ಇರುವ ಸಹಕಾರ ಸಂಸ್ಥೆಗಳಿಗೆ | ರೂ. 700/– |
| 3 | ವಿಭಾಗ ಮಟ್ಟಕ್ಕಿಂತ ಮೇಲ್ಪಟ್ಟು ಮತ್ತು ರಾಜ್ಯದ ವ್ಯಾಪ್ತಿ ಇರುವ ಸಹಕಾರ ಸಂಸ್ಥೆಗಳಿಗೆ | ರೂ. 800/– |

4. ಸಾದಿಲ್ವಾರು ವೆಚ್ಚಕ್ಕಾಗಿ ಪ್ರತಿ ಪಂಚಾಯತ ದಾವಾ ಪ್ರಕರಣಗಳು (ಆರ್ಥಿಕ) ಮತ್ತು ಪಂಚಾಯತ ದಾವಾ ಪ್ರಕರಣಗಳು (ಇತರೆ)ಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ದಾವಾ ಪ್ರಕರಣಗಳಲ್ಲೂ ರೂ. 120/– ಮತ್ತು ಒಬ್ಬರಿಗಿಂತ ಹೆಚ್ಚಿನ ಪ್ರತಿಯೊಬ್ಬ ಎದುರು ಅರ್ಜಿದಾರರಿಗೆ ರೂ.25/– ರಂತೆ ಪಾವತಿಸುವುದು.

5. ಗೌರವ ಮಧ್ಯಸ್ಥದಾರರು ಇತ್ಯರ್ಥ ಮಾಡುವ ಪ್ರತಿ ಪ್ರಕರಣದಲ್ಲೂ ಗೌರವ ಮಧ್ಯಸ್ಥದಾರರಿಗೆ ನಿಗದಿಗೊಳಿಸಿದ ಪಂಚಾಯತ ದಾವಾ ಶುಲ್ಕದ ಮುಕ್ಕಾಲು ಭಾಗವನ್ನು (3/4) ಪಾವತಿಸಿ, ಸರ್ಕಾರದ ಖಾತೆಗೆ 1/4 ನೇ ಭಾಗವನ್ನು "0425–ಕೋ–ಆಪರೇಟಿವ್ (ಸಹಕಾರ)" ಖಾತೆಗೆ ಜಮಾ ಮಾಡುವ ವ್ಯವಸ್ಥೆಯು ಮುಂದುವರೆಯುವುದು, ದಾವಾ ಶುಲ್ಕವನ್ನು ಪ್ರತಿ ಪ್ರಕರಣ ಒಂದಕ್ಕೆ ಅರ್ಜಿದಾರರಿಂದ ಪಾವತಿಸಿದ ಸಾದಿಲ್ವಾರು ವೆಚ್ಚ ರೂ. 120/– ಮತ್ತು ಒಬ್ಬರಿಗಿಂತ ಹೆಚ್ಚಿನ ಎದುರು ಅರ್ಜಿದಾರರಿದ್ದಲ್ಲಿ ಪ್ರತಿಯೊಬ್ಬ ಹೆಚ್ಚಿನ ಎದುರು ಅರ್ಜಿದಾರರಿಗೆ ತಲಾ ರೂ. 25/– ರಂತೆ ಪಾವತಿಸದ ಸಾದಿಲ್ವಾರು ವೆಚ್ಚವನ್ನು ಗೌರವ ಮಧ್ಯಸ್ಥದಾರರಿಗೆ ಪಾವತಿಸತಕ್ಕದ್ದು.

6. ಸರ್ಕಾರದ ಅಧಿಕಾರಿಗಳು ತೀರ್ಮಾನಿಸಿದ ಪ್ರಕರಣಗಳಲ್ಲಿ ಪೂರ್ಣ ಶುಲ್ಕವನ್ನು, ಸಾದಿಲ್ವಾರು ವೆಚ್ಚಗಳ ಸಹಿತ ಮೇಲಿನ ಖಾತೆಗೆ ಜಮಾ ಮಾಡತಕ್ಕದ್ದು.

7. ಒಂದು ಲಕ್ಷ ರೂ. ಗಳಿಗಿಂತ ಹೆಚ್ಚಾದ ಮೊತ್ತದ ದಾವೆಗಳ ಶೀಘ್ರ ವಿಲೇವಾರಿಗೆ ಜಂಟಿ ನಿಬಂಧಕರು: ಉಪ ನಿಬಂಧಕರು ಹಾಗೂ ಸಹಾಯಕ ನಿಬಂಧಕರುಗಳ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೂ ಸಹ ಇತ್ಯರ್ಥಕ್ಕೆ ವಹಿಸುವುದು.

8. ಈ ಅಧಿಸೂಚನೆಯ ಪ್ರತಿಗಳನ್ನು ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳಿಗೆ ಕಳುಹಿಸಲು ಜಿಲ್ಲಾ ಉಪ ನಿಬಂಧಕರು ಕ್ರಮ ಕೈಗೊಳ್ಳುವುದು.

**ಸಹಕಾರ ಸಂಘಗಳ ನಿಬಂಧಕರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

* ಸೌಹಾರ್ದ ಸಹಕಾರಿಗಳಿಗೂ ಸಹ ಪ್ರಸ್ತುತ ಇದೇ ಮೇಲ್ಕಂಡ ಶುಲ್ಕಗಳನ್ನು ಪಾವತಿಸಲು ಸೌಹಾರ್ದ ಸಹಕಾರಿ ನ್ಯಾಯಾಲಯದ ಪೀಠಾಧಿಕಾರಿಗಳು ತಿಳಿಸಿರುತ್ತಾರೆ.

# Co Operative Movement in India and Abroad - The Road Ahead

**Satish Marathe,** Formar Secreatry Indian Bank Association

Co Operatives, as economic enterprises and as self-help organizations, play a meaningful role in uplifting the socio-economic conditions of their members and their local communities. Over the years, Co Operative enterprises have successfully operated locally owned, people-centric economic enterprises and also served as catalysts for social organization and cohesion. With their concern for their members and communities, they represent a unique model that emphasises democratic and human values and respect for the environment.

**Indian Scenario :** India is a developing country facing number of problems, such as the population explosion, low productivity, inequalities, low living standards, inflation and so on. India consisting of 16% of the world's population sustains only on 2.4% of land resource. Agriculture sector is the only livelihood to the two-third of its population which gives employment to the 57% of work force and is a source of row material to large number of industries.

Co Operative movement in India is one of the largest movements in the world. Co Operative movement has made tremendous progress in every aspects of the Indian economy. Co Operative activities occupy a major place in the sphere of the Indian economy. Initially, the Co Operative movement was started with a limited scope of activities of rural credit but now it has entered in all fields of economic activity with social essence. Co Operative sector of Indian economy has always had a spiritual content as it was led by Vinoba Bhave, Vaikunthbhai Mehta and Dhananjayrao Gadgil.

The movement has covered 100 per cent villages and 75 per cent rural households and is functioning through a network of over 6 lacs Co Operatives of various levels with membership coverage of over 25 crores. In fertilizer production and distribution, the Indian Fertilizer Co Operatives command over 58% of the market. In the production of sugar, the market share of Co Operatives is over 58% and in cotton, Co Operatives have a share of 60%. The Co Operative sector accounted for 55% of the looms in the hand-weaving sector.

It has been playing a significant role in disbursing agricultural credit, distribution of agricultural inputs, providing market support, processing, etc. Co Operative movement has been recognized as an effective instrument for the economic development of the rural masses and for improvement in the socio-economic condition of the poor.

Way back in 2002, NABARD in its Annual Report had observed that Co Operatives have contributed significantly to the growth of institutional infrastructure in the rural areas and individual capital formation in the agricultural sector.

The first Co Operative Credit Societies Act was enacted in 1904. Subsequently, a more comprehensive legislation called the Cooperative Societies Act was enacted. This Act provided for the creation of the post of Registrar of Co Operative Societies for registration of Co Operative Societies, audit, etc. Under the Montague- Chelmsford Reforms of 1919, Co Operation became a provincial subject and provinces were authorized to make their own Co Operative laws. Under the Government of India Act 1935, Co Operatives were treated as a provincial subject. The 'Co Operative Societies' is now a State subject under entry No 32 of the State List of the Constitution of India.

The lacklustre performance of Co Operatives in India can be attributed to dormant membership and lack of active participation of members in the management of Co Operatives. Mounting overdues in Co Operative Credit Institutions, lack of mobilization of own resources and over dependence on Governmental and Institutional support, lack of professional management, bureaucratic and political control and interference in the management and over-politicization have proved harmful to its growth. These are the areas which need to be attended to by evolving suitable legislative and policy support.

Today a large number of men and women and their families are facing immense hardships. As a result of misconstrued economic policies, weaker segments viz.

farmers, workers, tribals, economically backward

communities, etc. are facing severe deprivation. The crisis represents the outcome of severe imbalances that have generated inequality and inequity which has led to a strong and growing feeling of injustice and exclusion amongst the underprivileged. In recent years, the State - Central and State Governments - has consistently refused to recognise the salient characteristics of the Co Operatives and have failed to harness its potential to achieve growth through participation of people.

The 100 years old Co Operative Acts, both, Central and the States, need to be radically redrafted in the changed economic, political and social scenario and create an enabling legal and financial environment to empower the Co Operatives. With a view to achieve rapid development and social harmony, we need to promote new models of Gen Next Co Operatives.

What are Co Operatives? How big is the Co Operative sector?

The Co Operative sector worldwide has about one billion members in over 100 countries. Across different countries, the proportion of the Co Operative membership to population varies, but is as high as 1 in 2 persons as in Finland and Singapore, 1 in 3 in Canada, New Zealand, Honduras, and Norway, 1 in 4 in the USA, Malaysia and Germany. Viewed in terms of households, Co Operative membership represents as much as 1 in 2 households in Finland and 1 in 3 in Japan.

In terms of percentage of a country's GDP attributable to Co Operatives, the proportion is highest in Kenya at 45 per cent, New Zealand with 22 percent. Co Operatives account for over 80 per cent of milk production in Norway, New Zealand and the USA. They account for 71 per cent of fishery production in Korea, 40 per cent of agriculture in Brazil, 25 per cent of Savings in Bolivia, 24 per cent of the health sector in Colombia, 55 per cent of the retail market in Singapore, 36 per cent in Denmark and 14 per cent in Hungary. It is estimated that Co Operatives account for more than 100 million jobs around the world.

Today as the world faces unstable financial systems, insecurity of food supply, growing inequality, rapid climate change and increased environmental degradation, it is increasingly compelled to consider the model of economic enterprise that Co Operatives offer. The Co Operative sector, especially in developing countries, also presents itself as an important element that can contribute to the realization of the Millennium Development Goals (MDGs).

The current financial crisis characterised by the massive public bail-out of private, Investor - owned Banks has underlined the virtues of a member-owned Co Operative Banking system. Co Operative Banks in the form of Credit Unions, Co Operative Banks and Building Societies - by focusing primarily on the needs of their members - have displayed prudence and avoided the excessive risk-taking that plagued many large global Banks and financial institutions. There are some 52,000 Credit Unions serving 177 million members in 100 countries under the umbrella of the World Council of Credit Unions that continue to operate and grow despite the ongoing financial crisis that began in 2008. Even the larger Co Operative Banks, such as Rabo Bank which is one of the largest agricultural Banks in the world, continues to grow from strength to strength demonstrating the value of the Co Operative Banking model.

The World Banks estimates that food demand will double by 2030 as the world's population increases by another two billion people. There is an urgent need for developing countries to increase output of food. The solution lies in encouraging farmers to mobilise collectively in Agricultural Co Operatives that engage in the production, processing and marketing of agricultural produce and give them access to markets. Hence, Farmer Co Operatives are needed to grow in all countries. Nevertheless, Farmer Co Operatives to reach their full potential, need finance and technical support.

In rural areas, Savings and Credit Co Operatives provide access to financial services, which are lacking. Credit Co Operatives play an important role in the promotion of small and micro businesses. They bring the kind of financial "deepening" that is necessary to reach the poor for sustainable growth.

**Source : http://www.un.org,**

**http://shodhganga.inflibnet.ac.in/bitstream/10603/2502/10/10_chapter%204.pdf**

**http://www.sociologyguide.com/rural-sociology/cooperatives-in-india.php**



# Reserve Bank of India News – August 2016

**K. Vittal Shetty,** kohimavittal@hotmail.com. Mobile : 9845699904

Dr. Raghuram G. Rajan, Governor RBI, announced the third Bi-monthly monetary policy statement 2016-17 on August 9, 2016.

**Based on an assessment of the current and evolving macroeconomic situation, it has been decided to :**

- keep the policy repo rate under the liquidity adjustment facility (LAF) unchanged at 6.5 per cent;
- keep the cash reserve ratio (CRR) of scheduled banks unchanged at 4.0 per cent of net demand and time liabilities (NDTL); and
- Continue to provide liquidity as required but progressively lower the average ex ante liquidity deficit in the system from one per cent of NDTL to a position closer to neutrality.

Consequently, the reverse repo rate under the LAF will remain unchanged at 6.0 per cent, and the marginal standing facility (MSF) rate and the Bank Rate at 7.0 per cent.

The fourth bi-monthly monetary policy statement on October 4, 2016, fifth bi-monthly monetary policy statement on December 6, 2016; and the sixth bi-monthly monetary policy statement on February 7, 2017.

## I.IMPORTANT NEWS

**Aug 01, 2016 :** RBI releases Guidelines for ‘on tap’ Licensing of Universal Banks in the Private Sector

**(I) Eligible Promoters**

(i) Individuals/professionals who are ‘residents’ and have 10 years of experience in banking and finance at a senior level.

(ii) Entities/groups in the private sector that are ‘owned and controlled by residents’ [as defined in FEMA Regulations, as amended from time to time] and have a successful track record for at least 10 years, provided that if such entity/group has total assets of ⍰ 50 billion or more, the non-financial business of the group does not account for 40 per cent or more in terms of total assets/in terms of gross income.

(iii) Existing non-banking financial companies (NBFCs) that are ‘controlled by residents’ and have a successful track record for at least 10 years. For the sake of clarity, it is added here that any NBFC, which is a part of the group that has total assets of ⍰50 billion or more and that the non-financial business of the group accounts for 40 per cent or more in terms of total assets/in terms of gross income, is not eligible.

**(II) ‘Fit and Proper’ criteria**

Promoter/promoting entity/promoter group should have a past record of sound financials, credentials, integrity and have a minimum 10 years of successful track record.

**(III) Corporate structure**

The requirement of Non-Operative Financial Holding Company (NOFHC) is not mandatory for individual promoters or standalone promoting/converting entities who/which do not have other group entities. Individual promoters/promoting entities/converting entities that have other group entities, shall set up the bank only through an NOFHC. Not less than 51 per cent of the total paid-up equity capital of the NOFHC shall be owned by the Promoter/

**Date : Aug 31, 2016**
**Scheduled Bank’s Statement of Position in India as on Friday, August 19, 2016 (Amount in Billions of ⍰)**

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | **21-AUG-2015** | **05-AUG-2016 *** | **19-AUG-2016 *** | **21-AUG-2015** | **05-AUG-2016 *** | **19-AUG-2016 *** |
| I | a) DEPOSITS | **89075.84** | 97593.15 | 97262.62 | 91451.39 | 100232.78 | **99921.51** |
| | i) Demand | **8050.7** | 9024.47 | 8988.33 | 8251.42 | 9250.25 | **9213.29** |
| | ii) Time | **81025.14** | 88568.68 | 88274.32 | 83199.96 | 90982.53 | **90708.24** |
| II | INVESTMENTS | **26705.67** | 28610.66 | 28234.75 | 27442.85 | 29727.71 | **29024.5** |
| III | BANK CREDIT | **66388.19** | 72959.21 | 72756.03 | 68414.62 | 75182.48 | **74991.49** |

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28



Promoter Group. Specialised activities would be permitted to be conducted from a separate entity proposed to be held under the NOFHC subject to prior approval from the Reserve Bank and subject to being ensured that similar activities are not conducted through the bank. No shareholder, other than the promoters/promoter group, shall have significant influence and control in the NOFHC.

**(IV) Minimum capital requirement**

The initial minimum paid-up voting equity capital for a bank shall be ₹ five billion. Thereafter, the bank shall have a minimum net worth of ₹ five billion at all times.

The promoter/s and the promoter group / NOFHC, as the case may be, shall hold a minimum of 40 per cent of the paid-up voting equity capital of the bank which shall be locked-in for a period of five years from the date of commencement of business of the bank. The promoter group shareholding shall be brought down to 15 per cent within a period of 15 years from the date of commencement of business of the bank.

**(V) Foreign shareholding in the bank**

The foreign shareholding in the bank would be as per the existing foreign direct investment (FDI) policy subject to the minimum promoter shareholding requirement indicated in paragraph (IV) above. At present, the aggregate foreign investment limit is 74 per cent.

**(VI) Corporate governance, prudential and exposure norms**

The bank shall comply with the provisions of Banking Regulations Act, 1949 and the existing guidelines on prudential norms as applicable to scheduled commercial banks. The bank is precluded from having any exposure to its promoters, major shareholders who have shareholding of 10 per cent or more of paid-up equity shares in the bank, the relatives of the promoters as also the entities in which they have significant influence or control.

**(VII) Business plan for the bank**

The business plan submitted by the applicant should be realistic and viable and address how the bank proposes to achieve financial inclusion.

**(VIII) Other conditions**

The bank shall get its shares listed on the stock exchanges within six years of the commencement of business by the bank. The bank shall open at least 25 per cent of its branches in unbanked rural centres (population up to 9,999 as per the latest census). The bank shall comply with the priority sector lending targets and sub-targets as applicable to the existing domestic scheduled commercial banks. The board of the bank should have a majority of independent directors.

**(IX) Procedure for application**

The licensing window will be open on-tap, and the applications in the prescribed form along with requisite information could be submitted to the Reserve Bank at any point of time.

August 04, 2016:-Dishonour of cheques – Modification in procedure

Banks were advised to introduce a condition for operation of accounts with cheque facility that in the event of dishonour of a cheque valuing rupees one crore and above drawn on a particular account of the drawer on four occasions during the financial year for want of sufficient funds in the account, no fresh cheque book would be issued. Also, the bank may consider closing current account at its discretion.

Aug 04, 2016 : RBI Governor launches Website to curb Illegal Collection of Deposits

"Initiating quick follow up and taking cases to logical conclusion by punishing the guilty is paramount to deter entities in future from carrying out unlawful activity. 'Sachet' would help regulators in doing this as much as it would help members of public in depositing their hard earned money with genuine entities by giving them timely information about these entities."

Source: www.rbi.org.in

Note : For Directions, Withdrawals, Penalties and Cancellation of Licences of Urban Cooperative Banks Please see www.rbi.org.in

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472-270222.
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010